# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/372/2015/ಎಆರ್‌ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 19/08/2021.

## ವಿಚಾರಣಾ ವರದಿ

**ಉಪಸ್ಥಿತರು:** **ಜಗದೀಶ್ವರ ಎಂ,** (ಪ್ರಭಾರ) ಅಪರ ನಿಬಂಧಕರು ವಿಚಾರಣೆಗಳು-13, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಶ್ರೀ. ಬಿ.ಎಸ್. ಶ್ರೀರಾಮ್, ಕಂದಾಯ ನಿರೀಕ್ಷಕರು, ವಾರ್ಡ್ ನಂ.38, ಆರ್.ಆರ್ ನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಬಿಸಿಡಿ-3243/2014/ ಡಿಆರ್‌ಇ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 24/04/2015.

2. ಸರ್ಕಾರದ ಆದೇಶ ಸಂಖ್ಯೆ:ನಅಇ 310 ಎಂಎನ್‌ವೈ 2015, ದಿನಾಂಕ: 29/06/2015.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ-372/2015, ಬೆಂಗಳೂರು, ದಿನಾಂಕ: 06/07/2015.

* * * *

1. ದೂರುದಾರರಾದ ಶ್ರೀ. ಕೆ.ಆರ್. ಲಕ್ಷ್ಮೀನಾರಾಯಣ ಬಿನ್ ಲೇಟ್ ಕೆ. ಕೃಷ್ಣಪ್ಪ, ನಂ.29, ಸರ್ಕ್ಯೂಲರ್ ರಸ್ತೆ, ನಂದಿನಿ ಎಕ್ಸ್‌ಟೆನ್‌ಶನ್, ಬೆಂಗಳೂರು ರವರು ಆಪಾದಿತ ಸರ್ಕಾರಿ ನೌಕರ

ಶ್ರೀ. ಬಿ.ಎಸ್. ಶಿವರಾಮ್, ಕಂದಾಯ ನಿರೀಕ್ಷಕರು, ವಾರ್ಡ್ ನಂ.38, ಆರ್.ಆರ್. ನಗರ, ಬಿ.ಬಿ.ಎಂ.ಪಿ, ಬೆಂಗಳೂರು ರವರ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ದೂರುದಾರರು ಸಿ-277 ಎಂಬ ಇಂಡಸ್ಟ್ರಿಯಲ್ ಷೆಡ್‌ನ್ನು ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಮೊದಲನೇ ಹಂತ 7ನೇ ಕ್ರಾಸ್‌ನಲ್ಲಿ ಪಡೆದುಕೊಂಡು, Dimension ಎಂಬ ಹೆಸರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದೆ. ಅದಕ್ಕೆ ಬಲಗಡೆ ಸಿ-276 ಎಂಬ ಇನ್ನೊಂದು ಇಂಡಸ್ಟ್ರಿಯಲ್ ಷೆಡ್ ಇತ್ತು. ಅದನ್ನು ರಮೇಶ್‌ಗೌಡ ಎನ್ನುವವರಿಂದ 2012 ರಲ್ಲಿ ಖರೀದಿ ಮಾಡಿದ್ದೆನು. ಆ ಷೆಡ್‌ನ್ನು ನಾನು ಮತ್ತು ಸಿ-275ರ ಸೈಟಿನ ಉದ್ಯಮಿದಾರರಾದ ಡಾಲ್ಫಿ ಡಿಕೂನ ಎನ್ನುವವರು ಸೇರಿ ತಲಾ ಅರ್ಧರ್ಧ ವಿಭಾಗ ಮಾಡಿಕೊಂಡಿರುತ್ತೇವೆ. ಅದನ್ನು ವಿಭಾಗ ಮಾಡಿಕೊಳ್ಳಲು ಮತ್ತು ಆ ಬಗ್ಗೆ ದಾಖಲೆ ಮಾಡಿಕೊಳ್ಳಲು ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಅಧಿಕಾರಿಯಾಗಿದ್ದ ಮತ್ತು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಬಿ.ಎಸ್. ಶ್ರೀರಾಮ್ ರವರನ್ನು ಇಬ್ಬರೂ ಭೇಟಿಯಾಗಿರುತ್ತೇವೆ. ಆ ಬಗ್ಗೆ ನಾವು ಅರ್ಜಿಯನ್ನು ಮೇ-2013 ರಲ್ಲಿ ಅರ್ಜಿಯನ್ನು ಕೊಟ್ಟಿದ್ದೆವು. ಆ ಅರ್ಜಿಯ ಮೇಲೆ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ತಡ ಮಾಡಿರುತ್ತಾರೆ. ದಿನಾಂಕ:03/09/2013 ರಂದು ನಾವು ಆಪಾದಿತ ಸರ್ಕಾರಿ ನೌಕರರನ್ನು ಭೇಟಿಯಾಗಲು ಕಛೇರಿಗೆ ಹೋದಾಗ ಅವರು ಕಛೇರಿಯಲ್ಲಿರಲಿಲ್ಲ ಮತ್ತು ಫೋನ್ ಮಾಡಿದಾಗ ನಾನೇ ನಿಮ್ಮ ಕಛೇರಿಗೆ ಬಂದು ಭೇಟಿ ಮಾಡುತ್ತೇನೆಂದು ಹೇಳಿರುತ್ತಾರೆ. ಅದರಂತೆ, ದಿನಾಂಕ:09/09/2013 ರಂದು ಆಪಾದಿತ ಸರ್ಕಾರಿ ನೌಕರರು ಸಾಯಂಕಾಲ ನಮ್ಮ ಕಛೇರಿಗೆ ಮಾತನಾಡಿ, ಅವರು ನಮಗೆ ನೀವು ಹೇಳಿದ ರೀತಿ ಸಿ-276 ಇಂಡಸ್ಟ್ರಿಯಲ್ ಷೆಡ್‌ನ್ನು ವಿಭಾಗ ಮಾಡಿಕೊಟ್ಟು, ಆ ಬಗ್ಗೆ ದಾಖಲೆ ಮಾಡಿಕೊಡಲು ರೂ.6.00 ಲಕ್ಷ ಲಂಚದ ಹಣವನ್ನು ನೀಡಬೇಕೆಂದು ಒತ್ತಾಯ ಮಾಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ:29/06/2015 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ:06/07/2015 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-4 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 22/07/2015 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ANNEXURE NO-1
## CHARGE

4. That, you-DGO/Sri. B.S. Sriram, while working as Revenue Inspector in BBMP, Ward No.38, R.R. Nagar Division during the year 2013, when complainant/Sri. K.R. Lakshminarayana, approached you on 05/09/2013 for change of khatha of

property No.C-276 an industrial shed situated in 1st phase of Peenya Industrial Estate, Bangalore into the name of himself and his friend Sri. Dalphi D. Kunha which was purchased by them under registered sale deed dated:17/09/2012, you, demanded and accepted a bribe of Rs.20,000/- as token advance out of demanded bribe of Rs. 2,00,000/- at about 6.45 p.m. on 07/10/2013 in your office. Thereby you-DGO being a Government Servant failed to maintain absolute integrity and devotion to the duty, the act which is unbecoming of a Government Servant and thereby committed misconduct as enumerated U/R 3(1)(i) to (iii) of Karnataka Civil Service (Conduct) Rules 1966.

**ANNEXURE NO-II**

**STATEMENT OF IMPUTATIONS OF MISCONDUCT**

5. On the complaint filed by Sri. K.R. Lakshminarayana R/o No. 29, Circular Road, Nandini Layout at Bangalore District (herein after referred as "complainant" for short), against DGO committed misconduct, an investigation was taken up u/sec. 9 of Karnataka Lokayukta Act 1984).

6. **Brief facts of the case are:-**

a) The complainant is running an industry called "Dimensions" at Door No. C-277 of 7th Cross in I phase of Peenya Industrial Estate at Bangalore. So also, his friend Sri. Dalphi D. Kunha runs an industry at Door No.C-275 under "Alpha Engineers". As such, he and his friend purchased property No.C-276 an industrial shed, located in between their said two industries, under a registered sale deed dated: 17/09/2012 from one Sri Ramesh Ghad and thereafter regularly paying its property tax;

So, their application dated:05/09/2013 made for change of khatha of said purchased industrial shed was pending with you-DGO in the office of Assistant Revenue Officer of BBMP, Lakshmidevi Nagar Sub-Division in Guraguntepalya at Bangalore.

As such, they had been making request repeatedly after approaching you-DGO in the said matter, but they were being harassed on one pretext or other by you-DGO without attending to their work.

b) Further, when they wanted to approach you-DGO on 03/10/2013, you–DGO was not available in the office, due to which when contacted over mobile of his said friend, you-DGO told him that in the evening of that day, you-DGO himself will come to "Alpha Engineers". Accordingly, after coming there, you-DGO told them that arrears of tax with penalty for the period during 2008-13, comes to more than Rs.6 lakhs and shown that figure on a piece of white papers;

c) For that, when you-DGO was told that at the time of selling said shed to them, its earlier owner had remitted the revenue and got khatha changed and thereafter they have been paying the Revenue/tax of said purchased property and shown the records in that regard. Then you-DGO told them that having adjustment with the previous Revenue Inspector, wrong amount has been shown to them and also told that for the period from 2008 to up to date including penalty, the amount to be remitted comes to Rs.6 lakhs;

d) For that, they told you-DGO that, if all the businessmen having their shed in the said industrial area

had been applied with the said criteria, they are also ready to pay the Revneue/tax and penalty.

e) Then you-DGO lastly told to give Rs.2 lakhs saying that if paid, you-DGO will talk to higher officers also and get the khatha changed;

f) Being not willing to pay bribe and approaching Lokayukta Police on 07/10/2013, you-DGO had taken the tainted (bribe) amount of Rs.20,000/-) as token advance of demanded amount of bribe of Rs.2 lakhs at the rate of 10% of the said amount from them in the said industrial No.C-275 on said date only, in connection with the said work;

g) Added to that, you–DGO failed to give any satisfactory reply or explanation or account for the said (tainted) bribe amount, when questioned by the I.O.

h) Thereafter, you-DGO was caught hold as you-DGO was found with the tainted (bribe) amount on said date, time and said place;

i) Then the said tainted (bribe) amount was seized from you-DGO under a mahazar by the I.O on said date;

j) Even there are statements of witnesses, including complainant, besides collected records and material filed by the I.O., which show your said repeated misconduct.

7. Said facts supported by the material on record show that, you-DGO, being a Government Servant, has failed to maintain absolute integrity, besides absolute devotion to duty and acted in a manner unbecoming of a Government Servant, and thereby repeatedly committed misconduct and made yourself liable for disciplinary action.

8. Therefore, investigation was taken up against you-DGO and an observation note was sent to you to show cause as to why recommendation should not be made to the Competent Authority for initiating departmental inquiry against you-DGO in the matter. For that, you-DGO gave your reply. However, the same has not been found convincing to drop the proceedings as ordered on 15/04/2015 in the order sheet.

9. Since said facts and material on record prima-facie show that you-DGO has repeatedly committed misconduct as per Rule 3(1) of KCS (Conduct) Rules, 1966, now acting u/sec. 12(3) of the Kanrataka Lokayukta Act, recommendation is made to the Competent Authority to initiate disciplinary proceedings against you-DGO and to entrust the inquiry to this Authority under Rule 14-A of the Karnataka Civil Services (Classification, Control and Appeal) Rules, 1957. In turn Competent Authority initiated disciplinary proceedings against you-DGO and entrusted the Enquiry to this institution vide Reference No-1 and Hon'ble Upalokayukta-1 nominated this enquiry Authority, to conduct enquiry and report vide reference No-2. Hence, this charge.

10. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ : 24/08/2015 ರಂದು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಯಿತು. ಆ.ಸ.ನೌ ರವರು ದಿನಾಂಕ:29/09/2015, 29/12/2015, 29/02/2016, 08/11/2016 ಗಳಂದು ವಿಚಾರಣೆಗೆ ಹಾಜರಾಗಿದ್ದು, ನಂತರ ಆ.ಸ.ನೌ.ರವರು ದಿನಾಂಕ : 09/03/2017 ರಿಂದ ವಿಚಾರಣೆ ಮುಗಿಯುವವರೆಗೂ

ವಿಚಾರಣೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರನ್ನು **ದಿನಾಂಕ 09/03/2017 ರಿಂದ** ಏಕಪಕ್ಷೀಯ ಎಂದು ಪರಿಗಣಿಸಲಾಗಿರುತ್ತದೆ ಹಾಗೂ ತಮ್ಮ ಪರವಾಗಿ ರಕ್ಷಣಾ ಹೇಳಿಕೆಯನ್ನಾಗಲಿ, ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

11. ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಲಕ್ಷ್ಮೀನಾರಾಯಣ (ದೂರುದಾರರ) ರವರನ್ನು ಪಿ.ಡಬ್ಲ್ಯೂ-1 ಎಂದು ಶ್ರೀ. ಡಿ. ವೆಂಕಟೇಶ್ ರವರನ್ನು ಪಿಡಬ್ಲ್ಯೂ-2 ಎಂದು ಶ್ರೀ. ಕೃಷ್ಣ ಎಂ.ವಿ ರವರನ್ನು ಪಿಡಬ್ಲ್ಯೂ-3 ಮತ್ತು ಶ್ರೀ.ಎಸ್.ಟಿ. ಯೋಗೇಶ್ ರವರನ್ನು ಪಿಡಬ್ಲ್ಯೂ-4 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-14 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ಆ.ಸ.ನೌರವರು ಗೈರು ಹಾಜರಾಗಿರುವುದರಿಂದ, ದ್ವಿತೀಯ ಮೌಖಿಕ ಹೇಳಿಕೆ (Sccond Oral Statement) ಅನ್ನು ಪಡೆದುಕೊಳ್ಳಲಾಗಿರುವುದಿಲ್ಲ.

12. ಆ.ಸ.ನೌರವರು ದಿನಾಂಕ: 29/02/2016 **ರಂದು** ಲಿಖಿತ ಹೇಳಿಕೆಯನ್ನು (Written Statement) ನ್ನು ಸಲ್ಲಿಸಿದ್ದು, ನಂತರ (Written Argument) ರಕ್ಷಣಾ ವಾದವನ್ನು ಸಲ್ಲಿಸದೆ ಏಕಪಕ್ಷೀಯವಾಗಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

13. ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

14. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1: ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ–2: ಆದೇಶವೇನು?**

15. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

16. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1) ಸಕಾರಾತ್ಮಕವಾಗಿ.**

**ಅಂಶ–2) ಅಂತಿಮ ಆದೇಶದಂತೆ.**

## ಕಾರಣಗಳು

17. **ಅಂಶ–1** : ಈ ಪ್ರಕರಣದಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಕೆ. ಆರ್. ಲಕ್ಷ್ಮೀನಾರಾಯಣ (ದೂರುದಾರರ) ರವರನ್ನು ಪಿ.ಡಬ್ಲ್ಯೂ–1 ಎಂದು ಶ್ರೀ. ಡಿ. ವೆಂಕಟೇಶ್ ರವರನ್ನು ಪಿ.ಡಬ್ಲ್ಯೂ–2 ಎಂದು ಶ್ರೀ. ಕೃಷ್ಣ ಎಂ.ವಿ ರವರನ್ನು ಪಿ.ಡಬ್ಲ್ಯೂ–3

ಮತ್ತು ಶ್ರೀ. ಎಸ್.ಟಿ. ಯೋಗೇಶ್ ರವರನ್ನು ಪಿಡಬ್ಲ್ಯೂ-4 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-14 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

18. ದೂರುದಾರ ಪಿಡಬ್ಲ್ಯೂ-1 ಶ್ರೀ. ಕೆ.ಆರ್. ಲಕ್ಷ್ಮೀನಾರಾಯಣ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆ.ಸ.ನೌ.ರವರು ಸಿ-277 ಎಂಬ ಇಂಡಸ್ಟ್ರಿಯಲ್ ಷೆಡ್‌ನ್ನು ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಮೊದಲನೇ ಹಂತ 7ನೇ ಕ್ರಾಸ್‌ನಲ್ಲಿ ಪಡೆದುಕೊಂಡು, Dimension ಎಂಬ ಹೆಸರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದೆ. ಅದಕ್ಕೆ ಬಲಗಡೆ ಸಿ-276 ಎಂಬ ಇನ್ನೊಂದು ಇಂಡಸ್ಟ್ರಿಯಲ್ ಷೆಡ್ ಇತ್ತು. ಅದನ್ನು ರಮೇಶ್‌ಗೌಡ ಎನ್ನುವವರಿಂದ 2012 ರಲ್ಲಿ ಖರೀದಿ ಮಾಡಿದ್ದೆನು. ಆ ಷೆಡ್‌ನ್ನು ನಾನು ಮತ್ತು ಸಿ-275ರ ಸೈಟಿನ ಉದ್ಯಮಿದಾರರಾದ ಡಾಲ್ಫಿ ಡಿಕೂನ ಎನ್ನುವವರು ಸೇರಿ ತಲಾ ಅರ್ಧರ್ಧ ವಿಭಾಗ ಮಾಡಿಕೊಂಡಿರುತ್ತೇವೆ. ಅದನ್ನು ವಿಭಾಗ ಮಾಡಿಕೊಳ್ಳಲು ಮತ್ತು ಆ ಬಗ್ಗೆ ದಾಖಲೆ ಮಾಡಿಕೊಳ್ಳಲು ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಅಧಿಕಾರಿಯಾಗಿದ್ದ ಮತ್ತು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಜಿ.ಎಸ್. ಶ್ರೀರಾಮ್ ರವರನ್ನು ಇಬ್ಬರೂ ಭೇಟಿಯಾಗಿರುತ್ತೇವೆ. ಆ ಬಗ್ಗೆ ನಾವು ಅರ್ಜಿಯನ್ನು ಮೇ-2013 ರಲ್ಲಿ ಅರ್ಜಿಯನ್ನು ಕೊಟ್ಟಿದ್ದೆವು. ಆ ಅರ್ಜಿಯ ಮೇಲೆ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ತಡ ಮಾಡಿರುತ್ತಾರೆ. ದಿನಾಂಕ:03/09/2013 ರಂದು ನಾವು ಆಪಾದಿತ ಸರ್ಕಾರಿ ನೌಕರರನ್ನು ಭೇಟಿಯಾಗಲು ಕಛೇರಿಗೆ ಹೋದಾಗ ಅವರು ಕಛೇರಿಯಲ್ಲಿರಲಿಲ್ಲ ಮತ್ತು ಫೋನ್ ಮಾಡಿದಾಗ ನಾನೇ ನಿಮ್ಮ ಕಛೇರಿಗೆ ಬಂದು ಭೇಟಿ ಮಾಡುತ್ತೇನೆಂದು ಹೇಳಿರುತ್ತಾರೆ. ಅದರಂತೆ, ದಿನಾಂಕ:09/09/2013 ರಂದು ಆಪಾದಿತ ಸರ್ಕಾರಿ ನೌಕರರು ಸಾಯಂಕಾಲ ನಮ್ಮ ಕಛೇರಿಗೆ ಮಾತನಾಡಿ, ಅವರು ನಮಗೆ ನೀವು ಹೇಳಿದ ರೀತಿ ಸಿ-276

ಇಂಡಸ್ಟ್ರಿಯಲ್ ಷೆಡ್‌ನ್ನು ವಿಭಾಗ ಮಾಡಿಕೊಟ್ಟು, ಆ ಬಗ್ಗೆ ದಾಖಲೆ ಮಾಡಿಕೊಡಲು ರೂ.6.00 ಲಕ್ಷ ಲಂಚದ ಹಣವನ್ನು ನೀಡಬೇಕೆಂದು ಒತ್ತಾಯ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

19. ಪಿಡಬ್ಲ್ಯೂ-1 ರವರು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಆನಂತರ ಪರಸ್ಪರ ಮಾತುಕತೆಯಾದ ನಂತರ ಈ ಬಗ್ಗೆ ಕನಿಷ್ಟ ರೂ.2.00 ಲಕ್ಷವನ್ನಾದರೂ ಕೊಡಲೇಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ನನ್ನ ಹತ್ತಿರ ಇದ್ದ ಸ್ಪೈ ಕ್ಯಾಮರಾದಿಂದ ದೃಶ್ಯಾವಳಿಯನ್ನು ಚಿತ್ರೀಕರಿಸಿಕೊಂಡಿದ್ದು ಮತ್ತು ಆಡಿಯೋವನ್ನು ಸಹ ರೆಕಾರ್ಡ್ ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

20. ಪಿಡಬ್ಲ್ಯೂ-1/ದೂರುದಾರ ರವರ ಮುಂದುವರೆದ ಸಾಕ್ಷ್ಯದಲ್ಲಿ, ಆನಂತರ ದಿನಾಂಕ: 07/10/2013 ರಂದು ನಾನು ಲೋಕಾಯುಕ್ತ ಪೋಲೀಸ್ ಕಛೇರಿಗೆ ಭೇಟಿ ಕೊಟ್ಟು, ಲೋಕಾಯುಕ್ತ ಪೋಲೀಸ್ ಇನ್ಸ್‌ಪೆಕ್ಟರ್ ರವರಿಗೆ ಸ್ಪೈ ಕ್ಯಾಮರಾದಲ್ಲಿದ್ದ ಸಿ.ಡಿಯನ್ನು ನೀಡಿರುತ್ತೇನೆ. ಅದನ್ನು ಅವರು ಕಂಪ್ಯೂಟರಿನಲ್ಲಿ ಅಳವಡಿಸಿಕೊಂಡು ನೋಡಿರುತ್ತಾರೆ. ಈ ಬಗ್ಗೆ ನಾನು ನಿ.ಪಿ-1 ನೇ ದೂರನ್ನು ನೀಡಿರುತ್ತೇನೆ. ನಿಶಾನೆ ಪಿ-1(ಎ) ಸಹಿ ನನ್ನದಾಗಿರುತ್ತದೆ. ಆನಂತರ ಪಿ.ಐ ರವರು ಸರ್ವೆ ಇಲಾಖೆಯಿಂದ ವೆಂಕಟೇಶ್ ಮತ್ತು ಕೃಷ್ಣ ಎಂಬ ಸರ್ಕಾರಿ ಅಧಿಕಾರಿಗಳನ್ನು ತಮ್ಮ ಕಛೇರಿಗೆ ಬರಮಾಡಿಕೊಂಡರು. ಅವರನ್ನು ನನಗೆ ಮತ್ತು ನನ್ನನ್ನು ಅವರಿಗೆ ಪರಿಚಯ ಮಾಡಿಸಿದರು. ನನ್ನ ದೂರಿನ ನಕಲನ್ನು ಪಂಚರಿಗೆ ಓದಿಕೊಳ್ಳಲು ನೀಡಿರುತ್ತಾರೆ. ಪಂಚರಿಗೆ ನಾನು ಹಾಜರುಪಡಿಸಿದ್ದ ಸಿ.ಡಿಯಲ್ಲಿನ ದೃಶ್ಯಾವಳಿ ಮತ್ತು ಸಂಭಾಷಣೆಯನ್ನು ತೋರಿಸಿರುತ್ತಾರೆ. ದೃಶ್ಯಾವಳಿ ಮತ್ತು ಸಂಭಾಷಣೆಯ ಬಗ್ಗೆ ಲಿಖಿತ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ. ಅದು ನಿಶಾನೆ ಪಿ-2 ಆಗಿರುತ್ತದೆ. ನಿಶಾನೆ ಪಿ-2(ಎ) ಸಹ ನನ್ನದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

21. ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಾನು ಆ ದಿನ ಆಪಾದಿತ ಸರ್ಕಾರಿ ನೌಕರರಿಗೆ ಕೊಡಲು ತಂದಿದ್ದ ರೂ.20,000/- ಹಣವನ್ನು ಅಂದರೆ ರೂ.1000/- ಮುಖಬೆಲೆಯ 15 ನೋಟುಗಳನ್ನು ಮತ್ತು ರೂ.500/- ಮುಖಬೆಲೆಯ 10 ನೋಟುಗಳನ್ನು ಹಾಜರುಪಡಿಸಿದ ಮೇರೆಗೆ, ಪಿ.ಐರವರು ಪಂಚರ ಮುಖಾಂತರ ಆ ನೋಟುಗಳ ನಂಬರ್ ಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿರುತ್ತಾರೆ. ಅದು ನಿಶಾನೆ ಪಿ-3 ಆಗಿದ್ದು, ನಿಶಾನೆ ಪಿ-3 (ಎ) ಸಹಿ ನನ್ನದಾಗಿರುತ್ತದೆ. ನಂತರ ನೋಟುಗಳಿಗೆ ಫಿನಾಪ್ತಲೀನ್ ಪೌಡರ್‌ನ್ನು ಲೇಪನ ಮಾಡಿಸಿ, ಅವುಗಳನ್ನು ಪಿ.ಐ ರವರು ನನ್ನ ಟೀ ಶರ್ಟಿನ ಎಡ ಪಾಕೆಟಿನಲ್ಲಿಟ್ಟಿರುತ್ತಾರೆ. ಪಿ.ಐ ರವರು ನನಗೆ ಆ ನೋಟುಗಳನ್ನು ಮುಟ್ಟುವ ಹಾಗಿಲ್ಲ. ಆಪಾದಿತ ಸರ್ಕಾರಿ ನೌಕರರರು ಹಣ ಕೇಳಿದಾಗ ಮಾತ್ರ ಅದನ್ನು ತೆಗೆದು ಕೊಡಬೇಕೆಂದು ಸೂಚನೆಯನ್ನು ನೀಡಿರುತ್ತಾರೆ. ಆನಂತರ ಒಂದು ದ್ರಾವಣವನ್ನು ತಯಾರು ಮಾಡಿಸಿರುತ್ತಾರೆ. ಅದನ್ನು 2 ಬಾಟಲಿಗೆ ಶೇಖರಣೆ ಮಾಡಿರುತ್ತಾರೆ. ಆ ಬಗ್ಗೆ ಪಂಚರಿಗೆ ಪ್ರದರ್ಶಿಸಿ ತೋರಿಸಿರುತ್ತಾರೆ. ಆ ಬಗ್ಗೆ ನಿಶಾನೆ ಪಿ-4 ರಂತೆ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿರುತ್ತಾರೆ. ನಿಶಾನೆ ಪಿ-4(ಎ) ಸಹಿ ನನ್ನದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

22. ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆನಂತರ ಲೋಕಾಯುಕ್ತ ಕಛೇರಿಯ 3 ಪಿ.ಐಗಳು ಮತ್ತು ಅವರ ಸಿಬ್ಬಂದಿ ಸರ್ಕಾರಿ ವಾಹನದಲ್ಲಿ ಮತ್ತು ನಾನು ಹಾಗೂ ಪಂಚರು ನನ್ನ ವಾಹನದಲ್ಲಿ ನಾವು ಮುಂದಾಗಿ, ಅವರು ಹಿಂದಿನಿಂದ ಲೋಕಾಯುಕ್ತ ಪೋಲೀಸ್ ಕಛೇರಿಯನ್ನು ಸಾಯಂಕಾಲ 4 ಗಂಟೆಗೆ ಬಿಟ್ಟು, ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಹೋಗಿ, ಸಿ-275 ರ ನಮ್ಮ ಸ್ನೇಹಿತ ಡಾಲ್ಫಿ ಡಿಕೊನ ರವರ ಷೆಡ್‌ಗೆ ಹೋಗಿ, ಆ ಷೆಡ್‌ನ ಹತ್ತಿರ ನನ್ನ ವಾಹನವನ್ನು ನಿಲ್ಲಿಸಿ, ಪೋಲೀಸ್ ವಾಹನವನ್ನು 200 ಅಡಿ ದೂರದಲ್ಲಿ ನಿಲ್ಲಿಸಿದರು. ಆ ಷೆಡ್‌ನ ಒಳಗಡೆ ನಾನು ಮತ್ತು ಸಿವಿಲ್ ಡ್ರೆಸ್‌ನಲ್ಲಿದ್ದ ಇಬ್ಬರು ಪಿ.ಐಗಳು

ಒಳಗಡೆ ಬಂದಿರುತ್ತಾರೆ ಮತ್ತು ಅವರಿಗೆ ನಾನು ನನ್ನ ಸ್ನೇಹಿತ ಡಾಲ್ಫಿ ಡಿಕೂನ ರವರನ್ನು ಪರಿಚಯ ಮಾಡಿಸಿರುತ್ತೇನೆ. ಅಲ್ಲಿಂದ ನನ್ನ ಸ್ನೇಹಿತ ಡಾಲ್ಫಿ ಡಿಕೂನ ರವರು ಆಪಾದಿತ ಸರ್ಕಾರಿ ನೌಕರರಿಗೆ ಫೋನ್ ಮಾಡಿ, ಹಣ ಪಡೆಯಲು ನೀವು ಬರುತ್ತೀರಾ ಮತ್ತು ನಾವೇ ನಿಮ್ಮ ಕಛೇರಿಗೆ ಬರಬೇಕಾ ಎಂದು ಕೇಳಲಾಗಿ, ಆಪಾದಿತ ಸರ್ಕಾರಿ ನೌಕರರು ನಾನೇ ಅರ್ಧ ಗಂಟೆಯ ಒಳಗಡೆ ಬರುತ್ತೇನೆಂದು ತಿಳಿಸಿರುತ್ತಾರೆ. ಅವರು ಬರುವ ಸಮಯಕ್ಕೆ ಸರಿಯಾಗಿ ನಾವು ಆಡಿಯೋ ರೆಕಾರ್ಡ್ ಮತ್ತು ವಾಯ್ಸ್‌ರೆಕಾರ್ಡ್‌ನ್ನು ಮಾಡಲು ವ್ಯವಸ್ಥೆ ಮಾಡಿರುತ್ತೇವೆ. ಆವಾಗ್ಗೆ ಇಬ್ಬರು ಇನ್ಸ್‌ಪೆಕ್ಟರ್ ರವರು ಬೇರೆ ರೂಮಿನಲ್ಲಿ ಕುಳಿತಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

23. ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸಾಯಂಕಾಲ 5.45 ಗಂಟೆಗೆ ಸರ್ಕಾರಿ ನೌಕರರು ನಾನು ಮತ್ತು ನನ್ನ ಸ್ನೇಹಿತ ಡಾಲ್ಫಿ ಡಿಕೂನರವರ ಕುಳಿತಿದ್ದ ಛೇಂಬರ್‌ಗೆ ಬಂದಿರುತ್ತಾರೆ. ಆ ಮಾತುಕತೆಯಲ್ಲಿ ನಾನು ಆಪಾದಿತ ಸರ್ಕಾರಿ ನೌಕರರಿಗೆ ನೀವು ಡಿಮ್ಯಾಂಡ್ ಮಾಡಿದ ಹಣದಲ್ಲಿ 10% ನ್ನು ಮಾತ್ರ ಕೊಡುತ್ತೇನೆ ಮತ್ತು ಉಳಿದ ಹಣ ಕೆಲಸ ಮುಗಿದ ನಂತರ ಕೊಡುತ್ತೇನೆಂದು ಹೇಳಿದಾಗ, ಆಪಾದಿತ ಸರ್ಕಾರಿ ನೌಕರರು 50% ವನ್ನಾದರೂ ಕೊಡಲೇಬೇಕು, ಅದರಲ್ಲಿ ನಾನು 30% ನ್ನು ನಮ್ಮ ಹಿರಿಯ ಅಧಿಕಾರಿಗಳಿಗೆ, ಲೋಕಲ್ ಕಾರ್ಪೋರೇಟರ್‌ಗೆ ಕೊಡಬೇಕೆಂದು ಹೇಳಿರುತ್ತಾರೆ. ಆನಂತರ ನಾನು ನನ್ನ ಟೀ ಶರ್ಟಿನ ಎಡ ಪಾಕೆಟಿನಲ್ಲಿದ್ದ ರೂ.20,000/- ಹಣವನ್ನು ಆಪಾದಿತ ಸರ್ಕಾರಿ ನೌಕರರ ಕೈಗೆ ಕೊಟ್ಟಿರುತ್ತಾರೆ. ಆ ಹಣವನ್ನು ಅವರು ಪಡೆದು ಎಣಿಸಲು ಶುರು ಮಾಡಿರುತ್ತಾರೆ. ಆ ಸಮಯಕ್ಕೆ ನಾನು ನನ್ನ ಕನ್ನಡಕವನ್ನು ತೆಗೆದು, ಕೆಮ್ಮುವ ಮುಖಾಂತರ ಸೂಚನೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

24. ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಹಿಂದುಗಡೆ ರೂಮಿನಲ್ಲಿದ್ದ ಇಬ್ಬರು ಪಿ.ಐ ಗಳು ಬಂದರು. ಅವರು ಬರುವುದನ್ನು ನೋಡಿ ಆಪಾದಿತ ಸರ್ಕಾರಿ ನೌಕರರು ಅವರ ಕೈಯಲ್ಲಿದ್ದ ಹಣವನ್ನು ಬೇಡ ಎಂದು ಛೇರ್ ಮೇಲೆ ಇಟ್ಟರು ಮತ್ತು ಕೈಯನ್ನು ಒರೆಸಲು ಪ್ರಾರಂಭಿಸಿದಾಗ, ಇಬ್ಬರು ಪಿ.ಐ ಗಳು ಬಂದು ಅವರ ಕೈಯನ್ನು ಹಿಡಿದುಕೊಂಡರು. ಆನಂತರ ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆಪಾದಿತ ಸರ್ಕಾರಿ ನೌಕರರ ಎರಡೂ ಕೈಗಳನ್ನು ಅದ್ದಿ ತೊಳೆಸಿದಾಗ ಅದು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದನ್ನು ಇನ್ನೊಂದು ಬಾಟಲಿಗೆ ಹಾಕಿ, ಸೀಲ್ ಮಾಡಿರುತ್ತಾರೆ. ಪಿ.ಐ ರವರು ಆ ಹಣವನ್ನು ಸಿಬ್ಬಂದಿಯ ಕೈಗೆ ಕೊಟ್ಟು ಚೆಕ್ ಮಾಡಿಸಿದರು ಮತ್ತು ಆ ಹಣವನ್ನು ಒಂದು ಕವರಿಗೆ ಹಾಕಿ, ಸೀಲ್ ಮಾಡಿರುತ್ತಾರೆ. ಆ ನಡವಳಿಕೆಯ ಸಮಯದಲ್ಲಿ ಆಪಾದಿತ ಸರ್ಕಾರಿ ನೌಕರರನ್ನು ಕೇಳಿದಾಗ ಅವರು ನರ್ವಸ್ ಆಗಿದ್ದರು. ಪಿ.ಐ ರವರು ಅವರಿಗೆ ಫ್ರೀಯಾಗಿ ಬಿಟ್ಟು ಯಾರಿಗಾದರೂ ಮಾತನಾಡಿಕೊಳ್ಳಿ ಎಂದು ಹೇಳಿದ ಮೇರೆಗೆ ಅವರು ಯಾರಿಗೋ ಫೋನ್ ಮಾಡಿದಾಗ ಕಾರ್ಪೋರೇಟರ್ ತಮ್ಮನ ಫೋನ್ ನನಗೆ ಬಂದಿರುತ್ತದೆ ಮತ್ತು ಅದರಲ್ಲಿ ಅವರು ನನಗೆ ಬೆದರಿಕೆ ಹಾಕಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

25. ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆದ್ದರಿಂದ, ಪಿ.ಐ ರವರಿಗೆ ಫೋನನ್ನು ಕೊಟ್ಟು ಮಾತನಾಡಿಕೊಳ್ಳಲು ಕೊಟ್ಟೆ. ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್ ಸೆಕ್ರೆಟರಿಗಳು ಅಲ್ಲಿಗೆ ಬಂದು ಕೇಸನ್ನು ರಾಜೀ ಮಾಡಿ ಇತ್ಯರ್ಥ ಮಾಡಿಕೊಳ್ಳಿ ಎಂದು ಒತ್ತಾಯ ಮಾಡಿರುತ್ತಾರೆ. ಆವಾಗ್ಗೆ ಪಿ.ಐ ರವರು ನಿಶಾನೆ ಪಿ-5 ರಂತೆ ಆಪಾದಿತ ಸರ್ಕಾರಿ ನೌಕರರ ಹೇಳಿಕೆಯನ್ನು ಬರೆದುಕೊಟ್ಟಿರುತ್ತಾರೆ. ನಿಶಾನೆ ಪಿ-5 ಆಪಾದಿತ ಸರ್ಕಾರಿ ನೌಕರರ ಸ್ವಹಸ್ತಾಕ್ಷರದಲ್ಲಿದ್ದು, ಅದರಲ್ಲಿ ನಿಶಾನೆ ಪಿ-5(ಎ) ಸಹಿ ನನ್ನದಾಗಿರುತ್ತದೆ. ನಾವು ಪಿ.ಐ ರವರಿಗೆ ವಾಯ್ಸ್ ರೆಕಾರ್ಡ್‌ರ್‌ನ್ನು ನೀಡಲಾಗಿ, ಅವರು ಅದನ್ನು ಕಂಪ್ಯೂಟರಿಗೆ ಫೀಡ್

ಮಾಡಿ, ಸಿಡಿಯನ್ನು ಮಾಡಿಕೊಂಡಿರುತ್ತಾರೆ. ಆ ಬಗ್ಗೆ ಬರವಣಿಗೆ ಮಾಡಿಕೊಂಡಿರುತ್ತಾರೆ. ಅಲ್ಲಿ ರಾತ್ರಿ 10 ಗಂಟೆಯವರೆಗೆ ನಡವಳಿಕೆ ನಡೆಸಿ, ನಿಶಾನೆ ಪಿ–6 ರಂತೆ ಮಹಜರ್ ಮಾಡಿರುತ್ತಾರೆ. ನಿಶಾನೆ ಪಿ–6 (ಎ) ಸಹಿ ನನ್ನದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

26. ಪಿ.ಡಬ್ಲ್ಯೂ–2 ಶ್ರೀ. ಡಿ. ವೆಂಕಟೇಶ್ ರವರು 2002 ರಿಂದ ಸೆಪ್ಟೆಂಬರ್ 2017 ರವರೆಗೂ ನಾನು ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿದ್ದೇನೆ. 2017 ರಲ್ಲಿ ನಾನು ಸರ್ವೇ ಆಯುಕ್ತರ ಕಚೇರಿಯಲ್ಲಿ ಭೂಮಾಪಕರಾಗಿ ಸೆಪ್ಟೆಂಬರ್ 2017 ರವರೆಗೆ ಸೇವೆ ಸಲ್ಲಿಸಿದ್ದೇನೆ. ನಾನು ಆ.ಸ.ನೌ ಶ್ರೀರಾಮ್ ಇವರನ್ನು ನೋಡಿದರೆ ಗುರುತಿಸ ಬಲ್ಲೆ. (ಆ.ಸ.ನೌ ಹಾಗೂ ಅವರ ರಕ್ಷಣಾ ಸಹಾಯಕರು ಗೈರುಹಾಜರ್ ಇರುತ್ತಾರೆ). ದಿನಾಂಕ: 07/10/2013 ರಂದು ನಾನು ಕಚೇರಿಯಲ್ಲಿದ್ದಾಗ ಲೋಕಾಯುಕ್ತ ಪೋಲೀಸರು ನಮ್ಮ ಮೇಲಾಧಿಕಾರಿಗಳಿಗೆ ಟ್ರ್ಯಾಪ್ ಪ್ರಕರಣದಲ್ಲಿ ಪಂಚರಾಗಲು ಸಿಬ್ಬಂದಿಯನ್ನು ಕಳುಹಿಸಿಕೊಡಿ ಎಂದಿದ್ದಕ್ಕೆ ನನ್ನನ್ನು ಹಾಗೂ ಚಾ.ಸ.3 ರವರನ್ನು ನಿಯೋಜಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

27. ಪಿಡಬ್ಲ್ಯೂ–2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಅದರಂತೆ ನಾವು ಲೋಕಾಯುಕ್ತ ಕಚೇರಿಗೆ ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಬಂದೆವು. ದೂರುದಾರರಾದ ಲಕ್ಷ್ಮಿನಾರಾಯಣ್‌ರವರನ್ನು ಪರಿಚಯ ಮಾಡಿಸಿದರು ಹಾಗೂ ಆ.ಸ.ನೌ ರವರು ಖಾತೆ ಬದಲಾವಣೆಗೆ 2 ಲಕ್ಷ ರೂಪಾಯಿ ಲಂಚ ಕೇಳಿದ ಬಗ್ಗೆ ತಿಳಿಸಿದರು. ದೂರುದಾರರು ಲಂಚ ಕೇಳಿದ ಸಂಭಾಷಣೆಯನ್ನು ತಮ್ಮ ಫೋನಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದರು. ನಮಗೆ ಅದನ್ನು ಕೇಳಿಸಿದರು. ಸದರಿ ಸಂಭಾಷಣೆಯಲ್ಲಿ ದೂರುದಾರರು ಬಿ.ಬಿ.ಎಂ.ಪಿ.ಗೆ 6 ಲಕ್ಷ ರೂಪಾಯಿ ಟ್ಯಾಕ್ಸ್ ಕಟ್ಟಬೇಕಾಗಿದ್ದು, ಅದನ್ನು ಕಡಿಮೆ ಮಾಡಿಸುತ್ತೇನೆ, ನನಗೆ 2 ಲಕ್ಷ ರೂಪಾಯಿ ಲಂಚ ಕೊಡಿ ಎಂದು ಆ.ಸ.ನೌ ಕೇಳಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

28. ಪಿಡಬ್ಲ್ಯೂ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಫಿರ್ಯಾದುದಾರರಿಗೆ ಆ.ಸ.ನೌ ರವರು 20,000/- ಹಣ ಮುಂಗಡವಾಗಿ ಲಂಚ ಕೊಡಬೇಕು ಅಂತ ಹೇಳಿದ ಮೇರೆಗೆ, ಫಿರ್ಯಾದುದಾರರು ಲೋಕಾಯುಕ್ತ ಕಚೇರಿಗೆ 20,000/- ಹಣವನ್ನು ತಂದಿದ್ದರು. ಅವರು 1000/- ರೂ. ಮುಖಬೆಲೆಯ 15 ನೋಟುಗಳನ್ನು, ಹಾಗೂ 500/- ರೂ. ಮುಖಬೆಲೆಯ 10 ನೋಟುಗಳನ್ನು ಅಂದರೆ ಒಟ್ಟು 20,000/- ರೂ.ಗಳನ್ನು ತಂದಿದ್ದರು. ಪೋಲೀಸರ ಸೂಚನೆ ಮೇರೆಗೆ ನಾವು ಸದರಿ ನೋಟುಗಳ ಕ್ರಮ ಸಂಖ್ಯೆಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡೆವು. ಲೋಕಾಯುಕ್ತ ಪೋಲೀಸರ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಲೇಪಿಸಿ, ಒಂದು ಕವರಿನಲ್ಲಿ ಹಾಕಿ, ಚಾ.ಸ.3 ರವರು ದೂರುದಾರರ ಷರ್ಟ್ ಜೇಬಿನಲ್ಲಿ ಇಟ್ಟರು. ಚಾ.ಸ.3 ಹಾಗೂ ನಾನು ಸದರಿ ಪೌಡರ್ ಲೇಪಿತ ನೋಟುಗಳನ್ನು ಮುಟ್ಟಿ ನೋಡಿದೆವು, ನಮ್ಮ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದಾಗ, ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

29. ಪಿಡಬ್ಲ್ಯೂ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸದರಿ ದ್ರಾವಣವನ್ನು ಒಂದು ಬಾಟಲಿಗೆ ಹಾಕಿ ಸೀಲ್ ಮಾಡಿದರು. ದೂರುದಾರರಿಗೆ ಆ.ಸ.ನೌ ರವರು ಲಂಚಕ್ಕೆ ಬೇಡಿಕೆಯಿಟ್ಟರೆ ಮಾತ್ರ ಕೊಡಿ ಎಂದು ತಿಳಿಸಿದರು. ನನಗೆ ಫಿರ್ಯಾದಿದಾರರ ಜೊತೆ ಹೋಗಲು ಹಾಗೂ ಅದನ್ನು ಗಮನಿಸಲು ತಿಳಿಸಿದರು. ಸದರಿ ದುಡ್ಡನ್ನು ಅವರಿಗೆ ಕೊಟ್ಟ ನಂತರ ಸನ್ನೆ ಮಾಡಿ ತಿಳಿಸಲು ನನಗೆ ಹೇಳಿದರು. ಈ ಬಗ್ಗೆ ಪೋಲೀಸರು ಒಂದು ಪ್ರಾಯೋಗಿಕ ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದರು. ಸದರಿ ಪ್ರಾಯೋಗಿಕ ಪಂಚನಾಮೆ ದೃಢೀಕೃತ ನಕಲನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

30. ಪಿಡಬ್ಲ್ಯೂ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಾವು, ದೂರುದಾರರು ಹಾಗೂ ಪೋಲೀಸ್ ಸಿಬ್ಬಂದಿ ಲೋಕಾಯುಕ್ತ ಇಲಾಖೆಯ ಎರಡು ಜೀಪ್‌ಗಳಲ್ಲಿ ಪ್ರತ್ಯೇಕ ತಂಡವಾಗಿ ಪೀಣ್ಯ ಇಂಡಸ್ಟ್ರೀಯಲ್ ಏರಿಯಾದಲ್ಲಿ ಇರುವಂತಹ ದೂರುದಾರರ ಆಲ್ಫಾ ಇಂಜನೀಯರ್ಸ್ ರವರ ಶೆಡ್‌ಗೆ ಹೋದೆವು. ನಾನು ಹಾಗೂ ಫಿರ್ಯಾದುದಾರರು ಒಂದನೇ ಮಹಡಿಯಲ್ಲಿ ಇರುವಂತಹ ಅವರ ಕೊಠಡಿಗೆ ಹೋದೆವು. ಆ.ಸ.ನೌ ರವರು ಸಂಜೆ 6.45 ಗಂಟೆಗೆ ದೂರುದಾರರ ಕಚೇರಿಗೆ ಬರುವುದಾಗಿ ತಿಳಿಸಿದ್ದರು. ಪೋಲೀಸರು ಹಾಗೂ ಚಾ.ಸ.3 ರವರು ಹೊರಗಡೆ ನಿಂತಿದ್ದರು ಹಾಗೂ ನಮ್ಮ ಸೂಚನೆಗೆ ಕಾಯುತ್ತಿದ್ದರು. ಸರಿಯಾಗಿ 6.45 ಗಂಟೆಗೆ ಆ.ಸ.ನೌ ಶ್ರೀರಾಮ್, ಕಂದಾಯ ನಿರೀಕ್ಷಕರು ದೂರುದಾರರ ಕಚೇರಿಗೆ ಬಂದರು. ದೂರುದಾರರು ತಮ್ಮ ಕೊಠಡಿಯಲ್ಲಿ ಕುಳಿತಿದ್ದರು ಹಾಗೂ ನಾನು ಹೊರಗಡೆ ಅವರನ್ನು ಗಮನಿಸುತ್ತಾ ಇದ್ದೆ. ದೂರುದಾರರ ಚೇಂಬರ್ ಗ್ಲಾಸಿನಿಂದ ಮಾಡಿದ್ದು, ಪಾರದರ್ಶಕವಾಗಿತ್ತು ಹಾಗೂ ಹೊರಗಡೆಯಿಂದ ಕಾಣುತ್ತಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

31. ಪಿಡಬ್ಲ್ಯೂ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆ.ಸ.ನೌ ಶ್ರೀರಾಮ್‌ರವರು ಸಾಯಂಕಾಲ 6.45 ರ ಸುಮಾರಿಗೆ ದೂರುದಾರರ ಕೊಠಡಿಗೆ ಬಂದರು ಹಾಗೂ ಅವರ ಎದುರುಗಡೆ ಕುರ್ಚಿಯಲ್ಲಿ ಕುಳಿತುಕೊಂಡರು. ದೂರುದಾರರು ತಮ್ಮ ಜೇಬಿನಲ್ಲಿ ಇದ್ದಂತಹ 20,000/- ರೂ.ಗಳನ್ನು ಕವರಿನಿಂದ ತೆಗೆದು, ಆ.ಸ.ನೌ ರವರಿಗೆ ನೀಡಿದರು. ಆ.ಸ.ನೌ ರವರು ಸದರಿ ದುಡ್ಡನ್ನು ತಮ್ಮ ಷರ್ಟ್ ಜೇಬಿನಲ್ಲಿ ಇಟ್ಟುಕೊಂಡರು. ನಾನು ಹೊರಗಡೆ ಬಂದು ಪೋಲೀಸರು ಹೇಳಿದ ಹಾಗೆ ಸನ್ನೆ ಮಾಡಿದೆನು. ಆಗ ಪೋಲೀಸರು ಹಾಗೂ ಚಾ.ಸ.3 ರವರು ಒಳಗಡೆ ಬಂದರು. ಇವರೆಲ್ಲರೂ ಒಳಗೆ ಬಂದ ತಕ್ಷಣ ಆ.ಸ.ನೌರವರು ಅವರನ್ನು ನೋಡಿದೊಡನೆ ಸದರಿ ಹಣವನ್ನು ತೆಗೆದು ಟೇಬಲಿನ ಮೇಲೆ ಇಟ್ಟರು. ಲೋಕಾಯುಕ್ತ

ತನಿಖಾಧಿಕಾರಿಯವರು ತಮ್ಮನ್ನು ಗುರುತಿಸಿಕೊಂಡರು ಹಾಗೂ ದೂರುದಾರರು ಆ.ಸ.ನೌ ರವರನ್ನು ತೋರಿಸಿ, ಪರಿಚಯ ಮಾಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

32. ಪಿಡಬ್ಲ್ಯೂ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆ.ಸ.ನೌ ರವರು ಟೇಬಲಿನ ಮೇಲೆ ಇಟ್ಟ ಹಣವನ್ನು ಪೋಲೀಸರು ತೆಗೆದುಕೊಂಡರು ಹಾಗೂ ನಮಗೆ ಸದರಿ ನೋಟುಗಳ ಕ್ರಮ ಸಂಖ್ಯೆಗಳನ್ನು ಪರಿಶೀಲಿಸಲು ತಿಳಿಸಿದರು. ನಾವು ಪರಿಶೀಲಿಸಿದಾಗ ನಾವು ಮೊದಲೇ ಹಾಳೆಯಲ್ಲಿ ಬರೆದಿಟ್ಟುಕೊಂಡ ಕ್ರಮ ಸಂಖ್ಯೆಗಳಿಗೆ ತಾಳೆಯಾದವು. ಆ.ಸ.ನೌ ರವರನ್ನು ಈ ಬಗ್ಗೆ ವಿಚಾರಿಸಿದಾಗ ಅವರು ಗಾಬರಿಯಾಗಿದ್ದರು ಹಾಗೂ ನಿರಾಕರಿಸಿದರು. ಪೋಲೀಸರು ಆ.ಸ.ನೌ ಶ್ರೀರಾಮ್ ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದರು. ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

33. ಪಿಡಬ್ಲ್ಯೂ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆ.ಸ.ನೌ ರವರಿಗೆ ಬೇರೆ ಷರ್ಟ್‌ನ್ನು ತರಿಸಿ ಕೊಟ್ಟು, ಸದರಿ ಷರ್ಟಿನ ಜೇಬನ್ನು ಸಹ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆದರು. ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಪೋಲೀಸರು ಸದರಿ ಹಣವನ್ನು ಜಪ್ತಿ ಮಾಡಿ ಕೊಂಡರು ಹಾಗೂ ಸದರಿ ದ್ರಾವಣಗಳನ್ನು ಬಾಟಲ್‌ಗಳಿಗೆ ಹಾಕಿ ಮೊಹರ್ ಮಾಡಿದರು. ಈ ಬಗ್ಗೆ ಪೋಲೀಸರು ವಿವರವಾದ ಪಂಚನಾಮೆಯನ್ನು ಜರುಗಿಸಿ, ನನ್ನ ಸಹಿ ಪಡೆದರು. ಸದರಿ ಟ್ರ್ಯಾಪ್ ಪಂಚನಾಮೆ ದೃಢೀಕೃತ ನಕಲನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಪೋಲೀಸರು ಆ.ಸ.ನೌ ರವರನ್ನು ದಸ್ತಗಿರಿ ಮಾಡಿದರು. ಆ.ಸ.ನೌ ರವರ ಮೇಲಾಧಿಕಾರಿಗಳನ್ನು ಕರೆಯಿಸಿ, ಅವರಿಗೆ ವಿಷಯ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

34. ಪಿಡಬ್ಲ್ಯೂ-3 ಶ್ರೀ. ಕೃಷ್ಣ ಎಂ.ವಿ ರವರು 2015 ರವರೆಗೆ ನಾನು ಸರ್ವೇ ಆಯುಕ್ತರ ಕಚೇರಿಯಲ್ಲಿ ಭೂಮಾಪಕರಾಗಿ ಸೇವೆ ಸಲ್ಲಿಸಿದ್ದೇನೆ. ನಾನು ಆ.ಸ.ನೌ ಶ್ರೀರಾಮ್ ಇವರನ್ನು ನೋಡಿದರೆ ಗುರುತಿಸ ಬಲ್ಲೆ. (ಆ.ಸ.ನೌ ಹಾಗೂ ಅವರ ರಕ್ಷಣಾ ಸಹಾಯಕರು ಗೈರುಹಾಜರ್ ಇರುತ್ತಾರೆ) ದಿನಾಂಕ: 07/10/2013 ರಂದು ನಾನು ಕಚೇರಿಯಲ್ಲಿದ್ದಾಗ ಲೋಕಾಯುಕ್ತ ಪೋಲೀಸರು ನಮ್ಮ ಮೇಲಾಧಿಕಾರಿಗಳಿಗೆ ಟ್ರ್ಯಾಪ್ ಪ್ರಕರಣದಲ್ಲಿ ಪಂಚರಾಗಲು ಸಿಬ್ಬಂದಿಯನ್ನು ಕಳುಹಿಸಿಕೊಡಿ ಎಂದಿದ್ದಕ್ಕೆ ನನ್ನನ್ನು ಹಾಗೂ ಚಾ.ಸ.2 ರವರನ್ನು ನಿಯೋಜಿಸಲಾಯಿತು. ಅದರಂತೆ ನಾವು ಲೋಕಾಯುಕ್ತ ಕಚೇರಿಗೆ ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಬಂದೆವು. ದೂರುದಾರರಾದ ಲಕ್ಷ್ಮಿನಾರಾಯಣ್‌ರವರನ್ನು ಪರಿಚಯ ಮಾಡಿಸಿದರು ಹಾಗೂ ಆ.ಸ.ನೌ ರವರು ಖಾತೆ ಬದಲಾವಣೆಗೆ 2 ಲಕ್ಷ ರೂಪಾಯಿ ಲಂಚ ಕೇಳಿದ ಬಗ್ಗೆ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

35. ಪಿಡಬ್ಲ್ಯೂ-3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದೂರುದಾರರು ಲಂಚ ಕೇಳಿದ ಸಂಭಾಷಣೆಯನ್ನು ತಮ್ಮ ಫೋನಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದರು. ನಮಗೆ ಅದನ್ನು ಕೇಳಿಸಿದರು. ಸದರಿ ಸಂಭಾಷಣೆಯಲ್ಲಿ ದೂರುದಾರರು ಬಿ.ಬಿ.ಎಂ.ಪಿ.ಗೆ 6 ಲಕ್ಷ ರೂಪಾಯಿ ಟ್ಯಾಕ್ಸ್ ಕಟ್ಟಬೇಕಾಗಿದ್ದು, ಅದನ್ನು ಕಡಿಮೆ ಮಾಡಿಸುತ್ತೇನೆ, ನನಗೆ 2 ಲಕ್ಷ ರೂಪಾಯಿ ಲಂಚ ಕೊಡಿ ಎಂದು ಆ.ಸ.ನೌ ಕೇಳಿದ್ದರು. ಫಿರ್ಯಾದುದಾರರಿಗೆ ಆ.ಸ.ನೌ ರವರು 20,000/- ಹಣ ಮುಂಗಡವಾಗಿ ಲಂಚ ಕೊಡಬೇಕು ಅಂತ ಹೇಳಿದ ಮೇರೆಗೆ, ಫಿರ್ಯಾದುದಾರರು ಲೋಕಾಯುಕ್ತ ಕಚೇರಿಗೆ 20,000/- ಹಣವನ್ನು ತಂದಿದ್ದರು. ಅವರು 1000/- ರೂ. ಮುಖಬೆಲೆಯ 15 ನೋಟುಗಳನ್ನು, ಹಾಗೂ 500/- ರೂ. ಮುಖಬೆಲೆಯ 10 ನೋಟುಗಳನ್ನು ಅಂದರೆ ಒಟ್ಟು 20,000/- ರೂ.ಗಳನ್ನು ತಂದಿದ್ದರು. ಪೋಲೀಸರ

ಸೂಚನೆ ಮೇರೆಗೆ ನಾವು ಸದರಿ ನೋಟುಗಳ ಕ್ರಮ ಸಂಖ್ಯೆಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ.

36. ಪಿಡಬ್ಲ್ಯೂ-3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಲೋಕಾಯುಕ್ತ ಪೋಲೀಸರ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಲೇಪಿಸಿ, ಒಂದು ಕವರಿನಲ್ಲಿ ಹಾಕಿ, ನಾನು ದೂರುದಾರರ ಷರ್ಟ್ ಜೇಬಿನಲ್ಲಿ ಇಟ್ಟರು. ಚಾ.ಸ.2 ಹಾಗೂ ನಾನು ಸದರಿ ಪೌಡರ್ ಲೇಪಿತ ನೋಟುಗಳನ್ನು ಮುಟ್ಟಿ ನೋಡಿದೆವು, ನಮ್ಮ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದಾಗ, ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿಗೆ ಹಾಕಿ ಸೀಲ್ ಮಾಡಿದರು. ದೂರುದಾರರಿಗೆ ಆ.ಸ.ನಾ ರವರು ಲಂಚಕ್ಕೆ ಬೇಡಿಕೆಯಿಟ್ಟರೆ ಮಾತ್ರ ಕೊಡಿ ಎಂದು ತಿಳಿಸಿದರು. ಚಾ.ಸ.2 ರವರಿಗೆ ಫಿರ್ಯಾದಿದಾರರ ಜೊತೆ ಹೋಗಲು ಹಾಗೂ ಅದನ್ನು ಗಮನಿಸಲು ತಿಳಿಸಿದರು. ಸದರಿ ದುಡ್ಡನ್ನು ಅವರಿಗೆ ಕೊಟ್ಟ ನಂತರ ಸನ್ನೆ ಮಾಡಿ ತಿಳಿಸಲು ಚಾ.ಸ.2 ರವರಿಗೆ ಹೇಳಿದರು. ಈ ಬಗ್ಗೆ ಪೋಲೀಸರು ಒಂದು ಪ್ರಾಯೋಗಿಕ ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದರು. ಸದರಿ ಪ್ರಾಯೋಗಿಕ ಪಂಚನಾಮೆ ದೃಢೀಕೃತ ನಕಲನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.4(ಸಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

37. ಪಿಡಬ್ಲ್ಯೂ-3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಾವು, ದೂರುದಾರರು ಹಾಗೂ ಪೋಲೀಸ್ ಸಿಬ್ಬಂದಿ ಲೋಕಾಯುಕ್ತ ಇಲಾಖೆಯ ಎರಡು ಜೀಪ್‌ಗಳಲ್ಲಿ ಪ್ರತ್ಯೇಕ ತಂಡವಾಗಿ ಪೀಣ್ಯ ಇಂಡಸ್ಟ್ರೀಯಲ್ ಏರಿಯಾದಲ್ಲಿ ಇರುವಂತಹ ದೂರುದಾರರ ಆಲ್ಫಾ ಇಂಜಿನೀಯರ್ಸ್ ರವರ ಶೆಡ್‌ಗೆ ಹೋದೆವು. ಚಾ.ಸ.2 ಹಾಗೂ ಫಿರ್ಯಾದುದಾರರು ಒಂದನೇ ಮಹಡಿಯಲ್ಲಿ ಇರುವಂತಹ ಅವರ ಕೊಠಡಿಗೆ ಹೋದರು. ಆ.ಸ.ನಾ ರವರು

ಸಂಜೆ 6.45 ಗಂಟೆಗೆ ದೂರುದಾರರ ಕಚೇರಿಗೆ ಬರುವುದಾಗಿ ತಿಳಿಸಿದ್ದರು. ಪೊಲೀಸರು ಹಾಗೂ ನಾವು ಹೊರಗಡೆ ನಿಂತಿದ್ದೆವು ಹಾಗೂ ಅವರ ಸೂಚನೆಗೆ ಕಾಯುತ್ತಿದ್ದೆವು. ಸರಿಯಾಗಿ 6.45 ಗಂಟೆಗೆ ಆ.ಸ.ನೌ ಶ್ರೀರಾಮ್, ಕಂದಾಯ ನಿರೀಕ್ಷಕರು ದೂರುದಾರರ ಕಚೇರಿಗೆ ಬಂದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

38. ಪಿಡಬ್ಲ್ಯೂ-3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸ್ವಲ್ಪ ಸಮಯದ ನಂತರ ಚಾ.ಸ.2 ರವರು ಹೊರಗಡೆ ಬಂದು, ಪೊಲೀಸರು ಹೇಳಿದ ಹಾಗೆ ಸನ್ನೆ ಮಾಡಿದರು. ಆಗ ಪೊಲೀಸರು ಹಾಗೂ ನಾನು ಒಳಗಡೆ ಹೋದೆವು. ನಾವೆಲ್ಲರೂ ಒಳಗೆ ಹೋದ ತಕ್ಷಣ ಆ.ಸ.ನೌ ರವರು ನಮ್ಮನ್ನು ನೋಡಿದೊಡನೆ ಸದರಿ ಹಣವನ್ನು ತೆಗೆದು ಟೇಬಲಿನ ಮೇಲೆ ಇಟ್ಟರು. ಲೋಕಾಯುಕ್ತ ತನಿಖಾಧಿಕಾರಿಯವರು ತಮ್ಮನ್ನು ಗುರುತಿಸಿಕೊಂಡರು ಹಾಗೂ ದೂರುದಾರರು ಆ.ಸ.ನೌ ರವರನ್ನು ತೋರಿಸಿ, ಪರಿಚಯ ಮಾಡಿದರು. ಆ.ಸ.ನೌ ರವರು ಟೇಬಲಿನ ಮೇಲೆ ಇಟ್ಟ ಹಣವನ್ನು ಪೊಲೀಸರು ತೆಗೆದುಕೊಂಡರು ಹಾಗೂ ನಮಗೆ ಸದರಿ ನೋಟುಗಳ ಕ್ರಮ ಸಂಖ್ಯೆಗಳನ್ನು ಪರಿಶೀಲಿಸಲು ತಿಳಿಸಿದರು. ನಾವು ಪರಿಶೀಲಿಸಿದಾಗ ನಾವು ಮೊದಲೇ ಹಾಳೆಯಲ್ಲಿ ಬರೆದಿಟ್ಟುಕೊಂಡ ಕ್ರಮ ಸಂಖ್ಯೆಗಳಿಗೆ ತಾಳೆಯಾದವು. ಆ.ಸ.ನೌ ರವರನ್ನು ಈ ಬಗ್ಗೆ ವಿಚಾರಿಸಿದಾಗ ಅವರು ಗಾಬರಿಯಾಗಿದ್ದರು ಹಾಗೂ ನಿರಾಕರಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

39. ಪಿಡಬ್ಲ್ಯೂ-3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಪೊಲೀಸರು ಆ.ಸ.ನೌ ಶ್ರೀರಾಮ್ ರವರ ಕೈಗಳನ್ನು ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ತೊಳೆಸಿದರು. ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಆ.ಸ.ನೌ ರವರಿಗೆ ಬೇರೆ ಷರ್ಟ್‌ನ್ನು ತರಿಸಿ ಕೊಟ್ಟು, ಸದರಿ ಷರ್ಟಿನ ಜೇಬನ್ನು ಸಹ ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ತೊಳೆದರು. ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಪೊಲೀಸರು ಸದರಿ ಹಣವನ್ನು

ಜಪ್ತಿ ಮಾಡಿ ಕೊಂಡರು ಹಾಗೂ ಸದರಿ ದ್ರಾವಣಗಳನ್ನು ಬಾಟಲ್‌ಗಳಿಗೆ ಹಾಕಿ ಮೊಹರ್ ಮಾಡಿದರು. ಈ ಬಗ್ಗೆ ಪೊಲೀಸರು ವಿವರವಾದ ಪಂಚನಾಮೆಯನ್ನು ಜರುಗಿಸಿ, ನನ್ನ ಸಹಿ ಪಡೆದರು. ಸದರಿ ಟ್ರ್ಯಾಪ್ ಪಂಚನಾಮೆ ದೃಢೀಕೃತ ನಕಲನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು. ಪೊಲೀಸರು ಆ.ಸ.ನೌ ರವರನ್ನು ದಸ್ತಗಿರಿ ಮಾಡಿದರು. ಆ.ಸ.ನೌ ರವರ ಮೇಲಾಧಿಕಾರಿಗಳನ್ನು ಕರೆಯಿಸಿ, ಅವರಿಗೆ ವಿಷಯ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

40. ಪಿಡಬ್ಲ್ಯೂ-4 ಶ್ರೀ.ಎಸ್.ಟಿ. ಯೋಗೇಶ್ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನವೆಂಬರ್ 2010 ರಿಂದ ಡಿಸೆಂಬರ್ 2013 ರವರೆಗೆ ನಾನು ಬೆಂಗಳೂರು ನಗರ ವಿಭಾಗದ ಲೋಕಾಯುಕ್ತ ಕಚೇರಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೆ. ದಿನಾಂಕ: 07/10/2013 ರಂದು ಕೆ. ಆರ್. ಲಕ್ಷ್ಮೀನಾರಾಯಣ್ ಇವರು ಮಧ್ಯಾಹ್ನ 12 ಗಂಟೆಗೆ ಒಂದು ಲಿಖಿತ ದೂರನ್ನು ಹಾಜರುಪಡಿಸಿದ್ದರು ಹಾಗೂ ಅದರ ಜೊತೆ ಒಂದು ಸಿಡಿಯನ್ನು ಸಹ ಹಾಜರು ಪಡಿಸಿದರು. ಇದರ ಆಧಾರದ ಮೇರೆಗೆ ಮೊ.ಸಂ.57/2013 ರಲ್ಲಿ ಕಲಂ.7 ಪಿಸಿ ಕಾಯ್ದೆ 1981 ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ 2 ಪಂಚಸಾಕ್ಷಿದಾರರಾಗಿ ಡಿ.ವೆಂಕಟೇಶ್ ಮತ್ತು ಎಂ.ವಿ.ಕೃಷ್ಣ ರವರಿಗೆ ನೋಟೀಸ್ ನೀಡಿ, ಕಚೇರಿಗೆ ಕರೆಯಿಸಿಕೊಂಡು, ದೂರುದಾರರನ್ನು ಅವರಿಗೆ ಪರಿಚಯಿಸಿ, ದೂರುದಾರರಿಗೆ ತಿಳಿಸಿ, ತನಿಖೆಗೆ ಸಹಕರಿಸುವಂತೆ ಕೇಳಿದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ.

41. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಂತರ ಪ್ರಕರಣದ ಪ್ರಾಯೋಗಿಕ ಪಂಚನಾಮೆ ಪ್ರಾರಂಭಿಸಿ, ದೂರುದಾರರು ಹಾಜರುಪಡಿಸಿದ್ದ ಸಿಡಿಯನ್ನು ಪಂಚಸಾಕ್ಷಿದಾರರ ಸಮಕ್ಷಮ ಲ್ಯಾಪ್‌ಟ್ಯಾಪಿನಲ್ಲಿ ಧ್ವನಿ ಮತ್ತು ವಿಡಿಯೋ ಚಿತ್ರೀಕರಣವನ್ನು

ಪರಿಶೀಲಿಸಿದಾಗ ಆ.ಸ.ನೌ ರವರು ದೂರುದಾರರಿಗೆ ಲಂಚದ ಹಣ ಕೇಳಿರುವುದು ದೃಢಪಟ್ಟಿರುವುದರಿಂದ ಅದರ ಲಿಪೀಕರಣ ಮತ್ತು ತದ್ರೂಪ ಸಿಡಿಯನ್ನು ತಯಾರಿಸಲು ಸಿಬ್ಬಂದಿಗೆ ಸೂಚಿಸಿದೆನು. ನಂತರ ದೂರುದಾರರು ಲಂಚದ ಹಣ ರೂ.20,000/-ಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಅವುಗಳ ನೋಟ್ ನಂಬರ್ ಮತ್ತು ಕ್ರಮ ಸಂಖ್ಯೆಗಳನ್ನು ಪ್ರತ್ಯೇಕವಾಗಿ ಗುರುತಿಸಿ, ಸಾಕ್ಷಿ 2 ಎಂ.ವಿ.ಕೃಷ್ಣ ರವರ ಸಹಾಯದಿಂದ ನಮ್ಮ ಸಿಬ್ಬಂದಿ ನೋಟಿನ ಎರಡೂ ಬದಿಗೆ ಫಿನಾಪ್ತಲೀನ್ ಪೌಡರನ್ನು ಲೇಪಿಸಿದ ನೋಟುಗಳನ್ನು ದೂರುದಾರರ ಷರ್ಟಿನ ಎಡ ಭಾಗದ ಜೇಬಿನಲ್ಲಿ ಇರಿಸಿರುತ್ತೇವೆ. ನಂತರ ಸಿಬ್ಬಂದಿ ಸಹಾಯದಿಂದ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರಿಸಿ, ಅದರಲ್ಲಿ ಸ್ವಲ್ಪ ಭಾಗವನ್ನು ಪ್ರತ್ಯೇಕವಾಗಿ ತೆಗೆದು ಅದನ್ನು ಆರ್ಟಿಕಲ್ ನಂ.1 ಎಂದು ಗುರುತಿಸಿ, ಮಾದರಿ ತೆಗೆದು ಉಳಿದಿದ್ದ ದ್ರಾವಣದಲ್ಲಿ ಸಾಕ್ಷಿ 2 ಎಂ.ವಿ.ಕೃಷ್ಣ ರವರ ಎರಡೂ ಕೈಗಳ ಬೆರಳುಗಳನ್ನು ಅದ್ದಿಸಿ ತೊಳೆದಿದ್ದು, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಆರ್ಟಿಕಲ್ ನಂ.2 ಎಂದು ಪರಿಗಣಿಸಿ, ವಶಕ್ಕೆ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

42. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದೂರುದಾರರು ಹಾಜರುಪಡಿಸಿದ್ದ ಸಿಡಿಯನ್ನು ಆರ್ಟಿಕಲ್ ನಂ.3 ಎಂದು ವಶಕ್ಕೆ ಪಡೆದು, ಪಂಚನಾಮೆ ಸಮಯದಲ್ಲಿ ದೂರುದಾರರಿಗೆ ಮತ್ತು ನೆರಳು ಸಾಕ್ಷಿದಾರರಿಗೆ ಅಗತ್ಯ ಸೂಚನೆಗಳನ್ನು ಕೊಟ್ಟಿದ್ದು, ಟ್ರ್ಯಾಪ್ ಸಿಗ್ನಲ್ ಆಗಿ ದೂರುದಾರರಿಗೆ ತಾವು ಧರಿಸಿದ್ದ ಕನ್ನಡಕವನ್ನು ತೆಗೆದು ಹಾಕುವ ಮೂಲಕ ಸೂಚಿಸಬೇಕು ಎಂದು ಆ.ಸ.ನೌ ರವರೊಂದಿಗೆ ತಮ್ಮ ಕೆಲಸದ ಬಗ್ಗೆ ಮಾತನಾಡಿ, ಅವರು ಹಣದ ಬಗ್ಗೆ ಪ್ರಸ್ತಾಪಿಸಿದ ನಂತರ ಲಂಚದ ಹಣ ಕೊಡಬೇಕೆಂದು ಸೂಚಿಸಿರುತ್ತೇನೆ. ಈ ಎಲ್ಲಾ ನಡವಳಿಗಳ ಬಗ್ಗೆ ಪಂಚನಾಮೆ ಸಮಯದಲ್ಲಿ ವಿಡಿಯೋಗ್ರಫಿ ಮಾಡಿ, ಅದನ್ನು ಒಂದು ಸಿಡಿಗೆ ಅಳವಡಿಸಿ, ಆರ್ಟಿಕಲ್ ನಂ.4 ಎಂದು ಗುರುತಿಸಿರುತ್ತೇನೆ.

ಅದೇ ದಿನ ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದೂರುದಾರರು, ಪಂಚಸಾಕ್ಷಿದಾರರು ಮತ್ತು ತಂಡದೊಡನೆ ದೂರುದಾರರ ಕೈಗಾರಿಕಾ ನಿವೇಶನ/ಷೆಡ್ ಇರುವ ಪೀಣ್ಯ ಕಡೆಗೆ ತೆರಳಿ, ಸಂಜೆ 5 ಗಂಟೆಗೆ ದೂರುದಾರರ ಆಲ್ಫಾ ಇಂಜಿನಿಯರ್ಸ್ ಎಂಬ ಫ್ಯಾಕ್ಟರಿಗೆ ತಲುಪಿದ್ದು, ಅಲ್ಲಿ ಮತ್ತೊಮ್ಮೆ ಎಲ್ಲಾ ಸಲಹೆ ಸೂಚನೆಗಳನ್ನು ನೀಡಿ, ದೂರುದಾರ, ದೂರುದಾರರ ಸ್ನೇಹಿತ ಶ್ರೀ ಡಾಲ್ಫಿ ಡಿ ಕುನ್ಹ ಅವರಿಗೆ ಮತ್ತು ನೆರಳು ಸಾಕ್ಷಿದಾರ 1 ವೆಂಕಟೇಶ್ ರವರಿಗೆ ತಂಡದ ಕೆಲವು ಸದಸ್ಯರೊಂದಿಗೆ ಮಳಿಗೆಯ ಒಳಭಾಗಕ್ಕೆ ಕಳುಹಿಸಿ, ಆ.ಸ.ನೌ ರವರ ಬರುವಿಕೆಗಾಗಿ ಕಾಯುವಂತೆ ಸೂಚಿಸಿ, ನಾವು ಸಹ ಮಳಿಗೆಯ ಅಕ್ಕ-ಪಕ್ಕದ ರಸ್ತೆಗಳಲ್ಲಿ ಗೌಪ್ಯವಾಗಿ ನಿಂತು ಕಾಯುತ್ತಿದ್ದೆವು ಎಂದು  ಸಾಕ್ಷ್ಯ ನುಡಿದಿರುತ್ತಾರೆ.

43. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸಂಜೆ ಸುಮಾರು 6.35 ಗಂಟೆಗೆ ಆ.ಸ.ನೌ ರವರು ದ್ವಿಚಕ್ರ ವಾಹನದಲ್ಲಿ ಕೈಗಾರಿಕಾ ಮಳಿಗೆ ಸಿ.275 ದ ಒಳಭಾಗಕ್ಕೆ ಪ್ರವೇಶಿಸಿದ್ದು ಕಂಡು ಬಂದಿರುತ್ತದೆ. ಅದಾದ ನಂತರ 10 ನಿಮಿಷಗಳ ನಂತರ ಮಳಿಗೆಯ ಹೊರಭಾಗಕ್ಕೆ ಬಂದ ನೆರಳು ಸಾಕ್ಷಿದಾರರು ನನಗೆ ಮತ್ತು ಉಳಿದ ತಂಡಕ್ಕೆ ಆ.ಸ.ನೌ ರವರು ಟ್ರ್ಯಾಪ್ ಆಗಿರುವ ಬಗ್ಗೆ ತಿಳಿಸಿದ್ದು, ನಾನು ತಂಡದೊಡನೆ ಮಳಿಗೆ ಒಳಭಾಗಕ್ಕೆ ಹೋದಾಗ ನಮ್ಮ ತಂಡದ ಇನ್ಸ್‌ಪೆಕ್ಟರ್ ಶಿವಶಂಕರ್ ಮತ್ತು ಅನಿಲ್ ಗ್ರಾಮಪುರೋಹಿತ್ ರವರು ಆ.ಸ.ನೌ ರವರನ್ನು ಸುತ್ತುವರೆದು ದೂರುದಾರರೊಂದಿಗೆ ಕೂರಿಸಿಕೊಂಡಿದ್ದು, ನಾನು ನನ್ನ ಗುರುತು ಪರಿಚಯ ತಿಳಿಸಿ, ಆ.ಸ.ನೌ ರವರು ಲೋಕಾಯುಕ್ತ ಟ್ರ್ಯಾಪಿಗೆ ಒಳಗಾಗಿರುವ ಬಗ್ಗೆ ತಿಳಿಸಿ, ಅವರ ಹೆಸರು ಮತ್ತು ಹುದ್ದೆ, ವಿಳಾಸಗಳ ಬಗ್ಗೆ ತಿಳಿದುಕೊಂಡೆ. ಅಲ್ಲೇ ಇದ್ದ ದೂರುದಾರರಿಗೆ ಟ್ರ್ಯಾಪ್ ವೇಳೆ ನಡೆದ ವಿದ್ಯಾಮಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಲು ತಿಳಿಸಿ, ನಂತರ ನಮ್ಮ ಸಿಬ್ಬಂದಿ ಸಹಾಯದಿಂದ ಎರಡು ಪ್ರತ್ಯೇಕ ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎರಡೂ ಬಟ್ಟಲುಗಳಿಂದ ಮಾದರಿಗಾಗಿ ಸ್ವಲ್ಪ

ದ್ರಾವಣವನ್ನು ಸಂಗ್ರಹಿಸಿ, ಅದನ್ನು ಆರ್ಟಿಕಲ್ ನಂ.5 ಎಂದು ಗುರುತಿಸಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

44. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಂತರ ನನ್ನ ಸೂಚನೆಯಂತೆ ಆ.ಸ.ನೌ ರವರ ಬಲಗೈ ಬೆರಳುಗಳನ್ನು ಒಂದು ಬಟ್ಟಲಿನಲ್ಲಿ ಅದ್ದಿಸಿ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಪ್ರತ್ಯೇಕವಾಗಿ ಎರಡೂ ಬಾಟಲುಗಳಲ್ಲಿ ಸಂಗ್ರಹಿಸಿ, ಆರ್ಟಿಕಲ್ ನಂ.6 ಮತ್ತು 6ಎ ಎಂದು ಗುರುತಿಸಿದೆನು. ಅದೇ ರೀತಿ ಆ.ಸ.ನೌ ರವರ ಎಡಗೈ ಬೆರಳುಗಳನ್ನು ಒಂದು ಬಟ್ಟಲಿನಲ್ಲಿ ಅದ್ದಿಸಿ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಪ್ರತ್ಯೇಕವಾಗಿ ಎರಡೂ ಬಾಟಲುಗಳಲ್ಲಿ ಸಂಗ್ರಹಿಸಿ, ಆರ್ಟಿಕಲ್ ನಂ.7 ಮತ್ತು 7ಎ ಎಂದು ಗುರುತಿಸಿದೆನು. ನಂತರ ದೂರುದಾರರು ತಿಳಿಸಿದಂತೆ ಆ.ಸ.ನೌ ರವರು ಲಂಚದ ಹಣ ಸ್ವೀಕರಿಸಿದ ನಂತರ ತಂಡವು ಅವರನ್ನು ಸುತ್ತುವರಿಯುವಷ್ಟರಲ್ಲಿ ಲಂಚದ ಹಣವನ್ನು ತಾವು ಕುಳಿತಿದ್ದ ಚೇರಿನ ಪಕ್ಕದಲ್ಲಿದ್ದ ಚೇರಿನ ಮೇಲೆ ಇಟ್ಟಿದ್ದರಿಂದ ಆ ಹಣವನ್ನು ನೆರಳುಸಾಕ್ಷಿದಾರರಾದ ಶ್ರೀ ವೆಂಕಟೇಶ್ ರವರ ಸಹಾಯದಿಂದ ತೆಗೆಸಿ, ಪರಿಶೀಲಿಸಿದ್ದು ನೋಟ್ ನಂಬರುಗಳು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ನಮೂದಿಸಿದ್ದ ನೋಟಿನ ನಂಬರ್ ಗಳಿಗೆ ತಾಳೆಯಾಗಿದ್ದು, ಅದು ಲಂಚದ ಹಣವೆಂದು ಖಚಿತಪಡಿಸಿಕೊಂಡು, ಅದನ್ನು ಆರ್ಟಿಕಲ್ ನಂ.8 ಎಂದು ಒಟ್ಟು ರೂ.20,000/-ಗಳನ್ನು ವಶಕ್ಕೆ ಪಡೆಯಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

45. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸದರಿ ಕಚೇರಿಯಲ್ಲೇ ಟ್ರ್ಯಾಪ್ ಪಂಚನಾಮೆಯನ್ನು ಪ್ರಾರಂಭಿಸಿ, ಪಂಚನಾಮೆಯ ಸಮಯದಲ್ಲಿ ದೂರುದಾರರ, ನೆರಳು ಸಾಕ್ಷಿದಾರರ ಮತ್ತು ಸಾಂದರ್ಭಿಕ ಸಾಕ್ಷಿದಾರರ ಹೇಳಿಕೆ ಮುಖ್ಯಾಂಶಗಳನ್ನು ದಾಖಲಿಸಿ, ಸ್ಥಳ ವಿನ್ಯಾಸದ ವಿವರಗಳನ್ನು ನಮೂದಿಸಿಕೊಂಡು ಕಚ್ಚಾ ನಕ್ಷೆಯನ್ನು

ತಯಾರಿಸಿಕೊಂಡಿರುತ್ತೇನೆ. ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ದೂರುದಾರರಿಗೆ ನೀಡಿದ ಸ್ಪೈ ಕ್ಯಾಮೆರಾ ಮತ್ತು ಡಿಜಿಟಲ್ ವಾಯ್ಸ್ ರೆಕಾರ್ಡರ್‌ಗಳನ್ನು ಟ್ರ್ಯಾಪ್ ಪಂಚನಾಮೆಯ ವೇಳೆ ಅವುಗಳನ್ನು ಪಡೆದು ಪರಿಶೀಲಿಸಿ, ಟ್ರ್ಯಾಪ್ ಸಮಯದಲ್ಲಿ ದೂರುದಾರರು ಮತ್ತು ಆ.ಸ.ನೌ ರವರ ಮಧ್ಯೆ ನಡೆದ ವಿದ್ಯಾಮಾನಗಳ ಬಗ್ಗೆ ದೃಶ್ಯಾವಳಿ ಮತ್ತು ಸಂಭಾಷಣೆಯ ಮುಖ್ಯಾಂಶಗಳನ್ನು ಪಂಚನಾಮೆಯಲ್ಲಿ ನಮೂದಿಸಿದೆ. ಈ ದೃಶ್ಯಾವಳಿ ಮತ್ತು ಸಂಭಾಷಣೆಯನ್ನು ಒಂದು ಸಿಡಿಗೆ ಅಳವಡಿಸಿಕೊಂಡು, ಅದನ್ನು ಆರ್ಟಿಕಲ್ ನಂ.9 ಎಂದು ಗುರುತಿಸಿದೆ. ಸ್ಥಳಕ್ಕೆ ಆ.ಸ.ನೌ ರವರ ಹಿರಿಯ ಅಧಿಕಾರಿಗಳಾದಂತಹ ಶ್ರೀ ಕೆ. ಬಸವಲಿಂಗಯ್ಯ ರವರನ್ನು ಸಹ ಬರಮಾಡಿಕೊಂಡು, ಪ್ರಕರಣದ ಬಗ್ಗೆ ವಿವರಿಸಿ, ಸಿಕ್ಕ ಸಾಕ್ಷ್ಯಾಧಾರಗಳನ್ನು ತೋರಿಸಿ, ಅವರಿಂದ ಒಂದು ಲಿಖಿತ ವರದಿಯನ್ನು ಪಡೆದುಕೊಂಡೆ. ಈ ಎಲ್ಲಾ ವಿದ್ಯಾಮಾನಗಳ ಬಗ್ಗೆ ವಿಡಿಯೋ ಚಿತ್ರೀಕರಣ ಮಾಡಿಸಿ, ಅದನ್ನು ಪ್ರತ್ಯೇಕವಾಗಿ ಒಂದು ಸಿಡಿಯಲ್ಲಿ ಸಂಗ್ರಹಿಸಿ, ಆರ್ಟಿಕಲ್ ನಂ.10 ಎಂದು ಗುರುತಿಸಿದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ.

46. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ರಾತ್ರಿ 10.30 ರವರೆಗೆ ವಿವರವಾದ ಪಂಚನಾಮೆಯನ್ನು ತಯಾರಿಸಿ, ಪಂಚಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡು, ಆ.ಸ.ನೌ ರವರಿಗೆ ಒಂದು ಪ್ರತಿಯನ್ನು ನೀಡಿ ಮೇಲ್ನೋಟಕ್ಕೆ ಆ.ಸ.ನೌ ರವರು ಲಂಚದ ಹಣ ಸ್ವೀಕರಿಸಿದ ಬಗ್ಗೆ ದೃಢಪಟ್ಟ ಮೇರೆಗೆ ದಸ್ತಗಿರಿ ಕ್ರಮಕ್ಕೆ ಒಳಪಡಿಸಿ, ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ರೀತಿ, ಆ ದಿನ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಿ, ಮಾಲುಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ: 08/10/2013 ರಂದು ಪಂಚಸಾಕ್ಷಿದಾರರ ವಿವರವಾದ ಹೇಳಿಕೆಗಳನ್ನು ದಾಖಲಿಸಿಕೊಂಡೆನು, ಅದೇ ದಿನ

ದೂರುದಾರರ ಕೆಲಸದ ಸಂಬಂಧ ಇರುವ ಸರ್ಕಾರಿ ಕಡತದ ಬಗ್ಗೆ ಆ.ಸ.ನೌ ರವರ ಮೇಲಾಧಿಕಾರಿಗಳಿಗೆ ವಿಚಾರಿಸಿದ್ದು, ಸದರಿ ಕಡತವು ಆ.ಸ.ನೌ ರವರ ಕಚೇರಿಯಲ್ಲಿ ಅವರ ಅಧೀನ ಅಧಿಕಾರಿಗಳ ಬಳಿ ಇರುವುದಾಗಿ ತಿಳಿಸಿದ್ದು, ಪಂಚಸಾಕ್ಷಿದಾರರೊಂದಿಗೆ ಸದರಿ ಕಡತವನ್ನು ಮೇಲಾಧಿಕಾರಿಗಳಾದ ಶ್ರೀ. ಕೆ. ಬಸವಲಿಂಗಯ್ಯ ರವರ ಕಡೆಯಿಂದ ಲೋಕಾಯುಕ್ತ ಕಚೇರಿಗೆ ತರಿಸಿಕೊಂಡು, ದಾಖಲೆಗಳನ್ನು ಪರಿಶೀಲಿಸಿ, ದೂರುದಾರರ ಕೆಲಸ ಆ.ಸ.ನೌ ರವರ ಬಳಿ ಬಹಳ ದಿನಗಳಿಂದ ಬಾಕಿಯಿದ್ದ ಬಗ್ಗೆ ಖಚಿತಪಟ್ಟ ಮೇರೆಗೆ ದೃಢೀಕೃತ ದಾಖಲಾತಿಗಳನ್ನು ಪಡೆದುಕೊಂಡು, ಮೂಲ ಕಡತವನ್ನು ಆ.ಸ.ನೌ ರವರ ಮೇಲಾಧಿಕಾರಿಗಳಿಗೆ ನೀಡಿ, ನಿಯಮಾನುಸಾರ ಕ್ರಮ ಜರುಗಿಸುವಂತೆ ಸೂಚಿಸಿರುತ್ತೇನೆ. ದಿನಾಂಕ:09/10/2013 ರಂದು ದೂರುದಾರ ಮತ್ತು ದೂರುದಾರರ ಸ್ನೇಹಿತರ ಹೇಳಿಕೆಗಳನ್ನು ದಾಖಲಿಸಿಕೊಂಡೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ.

47. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ:21/10/2013 ರಂದು ಆ.ಸ.ನೌ ರವರ ಕರ್ತವ್ಯ ಹಂಚಿಕೆ ವಿವರಗಳು ಮತ್ತು ದೂರುದಾರರಿಗೆ ಸಂಬಂಧಿಸಿದ ಕಡತದಲ್ಲಿ ಆಗಿರುವ ವಿಳಂಬ ಮತ್ತು ಇತರ ಲೋಪಗಳ ಬಗ್ಗೆ ವರದಿಯನ್ನು ಸ್ವೀಕರಿಸಿದೆ. ದಿನಾಂಕ:25/11/2013 ರಂದು ಆ.ಸ.ನೌ ರವರು ಕೃತ್ಯಕ್ಕೆ ಬಳಸಿದ್ದ ವಾಹನದ ಬಿ ವಹಿಯನ್ನು ಸ್ವೀಕರಿಸಿದ್ದು, ವಾಹನವು ಆ.ಸ.ನೌ ರವರ ಹೆಸರಿನಲ್ಲಿರುವುದು ದೃಢಪಟ್ಟಿರುತ್ತದೆ. ದಿನಾಂಕ:27/11/2013 ರಂದು ಕೃತ್ಯ ನೆಡೆದ ಸ್ಥಳದ ನಕ್ಷೆಯನ್ನು ಸ್ವೀಕರಿಸಿದೆ ಹಾಗೂ ಪ್ರಕರಣದಲ್ಲಿ ರಾಸಾಯನಿಕ ತಜ್ಞರ ವರದಿಯನ್ನು ಸಹ ಸ್ವೀಕರಿಸಿರುತ್ತೇನೆ. ದಿನಾಂಕ:03/12/2013 ರಂದು ಆ.ಸ.ನೌ ರವರ ಸೇವಾ ವಿವರಗಳ ದಾಖಲೆಗಳನ್ನು ತನಿಖೆಯಲ್ಲಿ ಪಡೆದುಕೊಂಡಿರುತ್ತೇನೆ. ಇದಲ್ಲದೆ, ಈ ಪ್ರಕರಣದಲ್ಲಿ ತನಿಖೆಗೆ ಸಹಕರಿಸಿದ ಸಿಬ್ಬಂದಿಗಳ ಹೇಳಿಕೆಗಳನ್ನು ಸಹ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

48. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ:10/12/2013 ರಂದು ನನಗೆ ವರ್ಗಾವಣೆಯಾಗಿದ್ದು, ನನ್ನ ಈ ಪ್ರಕರಣದ ಕಡತವನ್ನು ಮುಂದಿನ ತನಿಖಾಧಿಕಾರಿ ಶ್ರೀ ಹೆಚ್.ಪಿ.ಪುಟ್ಟಸ್ವಾಮಿ ಯವರಿಗೆ ವಹಿಸಿದ್ದು, ಅವರು ಕಡತವನ್ನು ಪರಿಶೀಲಿಸಿ ಅಂತಿಮ ವರದಿಯನ್ನು ತಯಾರಿಸಿ, ಸಕ್ಷಮ ಪ್ರಾಧಿಕಾರಿಗಳಿಂದ ಆ.ಸ.ನೌ ರವರ ವಿರುದ್ಧ ಅಭಿಯೋಜನಾ ಮಂಜೂರಾತಿ ಆದೇಶ ಪಡೆದುಕೊಂಡು, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದರು. ದೂರುದಾರರ ದೂರನ್ನು ನೋಡುತ್ತಿದ್ದು, ಅದು ನಿ.ಪಿ.1 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

49. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸಂಭಾಷಣೆಯ ಲಿಪೀಕರಣ ನೋಡುತ್ತಿದ್ದು, ಅದು ನಿ.ಪಿ.2 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನೋಟುಗಳ ನಂಬರ್ ಬರೆದಿಟ್ಟಿದ್ದ ಹಾಳೆಯನ್ನು ನೋಡುತ್ತಿದ್ದು, ಅದು ನಿ.ಪಿ.3 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಪ್ರಾಯೋಗಿಕ ಪಂಚನಾಮೆಯನ್ನು ನೋಡುತ್ತಿದ್ದು, ಅದು ನಿ.ಪಿ.4 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.4(ಡಿ) ಎಂದು ಗುರುತಿಸಲಾಯಿತು. ಆ.ಸ.ನೌ ರವರ ಲಿಖಿತ ಸಮಜಾಯಿಷಿಯನ್ನು ನೋಡುತ್ತಿದ್ದು, ಅದು ನಿ.ಪಿ.5 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆಯನ್ನು ನೋಡುತ್ತಿದ್ದು, ಅದು ನಿ.ಪಿ.6 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.6(ಡಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

50. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆ.ಸ.ನೌ ರವರ ಮೇಲಾಧಿಕಾರಿಗಳ ವರದಿ ನೋಡುತ್ತಿದ್ದು, ಅದು ನಿ.ಪಿ.7 ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಆ.ಸ.ನೌ ರವರ ವಾಹನದ ಬಿ ವಹಿಯ ದಾಖಲೆಯನ್ನು ನೋಡುತ್ತಿದ್ದು, ಅದು ನಿ.ಪಿ.8 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ಎಫ್‌ಎಸ್‌ಎಲ್ ವರದಿಯನ್ನು ನೋಡುತ್ತಿದ್ದು, ಅದು ನಿ.ಪಿ.9 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಆ.ಸ.ನೌ ರವರ ಸೇವಾ ವಿವರದ ದಾಖಲೆಯನ್ನು ನೋಡುತ್ತಿದ್ದು, ಅದು ನಿ.ಪಿ.10 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

51. ಪಿಡಬ್ಲ್ಯೂ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದೂರುದಾರರಿಗೆ ಸಂಬಂಧಪಟ್ಟ ಕಡತದ ಜೆರಾಕ್ಸ್ ಪ್ರತಿಗಳನ್ನು ನೋಡುತ್ತಿದ್ದು, ಅದು ನಿ.ಪಿ.11 (ಒಟ್ಟು 52 ಹಾಳೆಗಳು) ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳದ ನಕ್ಷೆ ನೋಡುತ್ತಿದ್ದು, ಅದು ನಿ.ಪಿ.12 (ಒಟ್ಟು 2 ಹಾಳೆಗಳು) ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ನಿ.ಪಿ.11 ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಮಾಡಲಾದ ಮಹಜರ್ ನೋಡುತ್ತಿದ್ದು, ಅದನ್ನು ನಿ.ಪಿ.13 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಆ.ಸ.ನೌ ರವರಿಗೆ ಕರ್ತವ್ಯ ಹಂಚಿಕೆ ಮಾಡಿದ ಕುರಿತು ಬಿಬಿಎಂಪಿ ಕಚೇರಿಯಿಂದ ಪಡೆದ ದಾಖಲೆಯನ್ನು ನೋಡುತ್ತಿದ್ದು, ಅದನ್ನು

ನಿ.ಪಿ.14 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

52. ಈ ವಿಚಾರಣೆಯಲ್ಲಿ ದೋಷಾರೋಪಣೆಯನ್ನು ಆ.ಸ.ನೌ ರವರಿಗೆ ಜಾರಿ ಆದ ನಂತರ ಆ.ಸ.ನೌ ರವರು ಹಾಜರಾಗಿ ವಕೀಲರನ್ನು ಸಹ ನೇಮಿಸಿಕೊಂಡಿದ್ದರು. ದಿನಾಂಕ: 09/03/2017 ರ ತನಕ ವಿಚಾರಣೆಯಲ್ಲಿ ಆ.ಸ.ನೌ ರವರು, ವಕೀಲರು ಹಾಜರಾಗಿರುತ್ತಾರೆ. ತದನಂತರ ದಿನಾಂಕ: 06/05/2017 ರಿಂದ ದಿನಾಂಕ: 14/07/2021 ರವರೆಗೆ ವಿಚಾರಣೆ ಮುಕ್ತಾಯಗೊಳ್ಳುವ ತನಕ ಆ.ಸ.ನೌ ರವರು ಮತ್ತು ವಕೀಲರು ಹಾಜರಾಗಿರುವುದಿಲ್ಲ ಮತ್ತು ಪಿಡಬ್ಲ್ಯೂ-1 ರಿಂದ 4 ರವರ ಪಾಟೀ ಸವಾಲನ್ನು ನಡೆಸಿರುವುದಿಲ್ಲ.

53. ಈ ಮೇಲ್ಕಂಡಂತೆ, ಆ.ಸ.ನೌರವರು ದುರ್ನಡತೆ ಎಸಗಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಾವಳಿಗಳು-1966ರ ನಿಯಮ 3(1) (i) ರಿಂದ (iii) ರನ್ವಯ ದೋಷಾರೋಪಣೆ ರಚಿಸಲಾಗಿರುತ್ತದೆ.

54. ಆ.ಸ.ನೌರವರು ಈ ಪ್ರಕರಣದಲ್ಲಿ ವಕೀಲರ ಮುಖಾಂತರ ಹಾಜರಾದಾಗಿಯೂ, ಪಿ.ಡಬ್ಲ್ಯೂ-1 ರಿಂದ 4 ರವರುಗಳನ್ನು ಪಾಟೀ ಸವಾಲು ವಿಚಾರಣೆಗೆ ಒಳಪಡಿಸಿರುವುದಿಲ್ಲ. ಆ.ಸ.ನೌರವರು ಗೈರು ಹಾಜರಾಗಿರುವುದರಿಂದ ಏಕತರ್ಫಿ / ಏಕಪಕ್ಷೀಯ ಎಂದು ನಿರ್ಧರಿಸಲಾಗಿರುತ್ತದೆ.

55. ಆ.ಸ.ನೌ.ರವರು ಲಿಖಿತ ವಾದವನ್ನು ಸಲ್ಲಿಸಿರುವುದಿಲ್ಲ.

56. ಮೇಲೆ ತಿಳಿಸಿದಂತೆ ಆ.ಸ.ನೌರವರು ಈ ಪ್ರಕರಣದಲ್ಲಿ ಪಿ.ಡಬ್ಲ್ಯೂ-1 ರಿಂದ 4 ರವರುಗಳನ್ನು ಪಾಟೀ ಸವಾಲು ನಡೆಸದೇ ಇರುವುದರಿಂದ ಪಿ.ಡಬ್ಲ್ಯೂ-1 ರಿಂದ 4 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆ.ಸ.ನೌ ರವರ ಮೇಲಿನ ಆಪಾದನೆ ಸಿದ್ಧವಾಗುತ್ತದೆ.

57. ಈ ಎಲ್ಲಾ ಕಾರಣಗಳಿಂದ ಆ.ಸ.ನೌರವರು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

58. ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i)ರಿಂದ (iii) ರಡಿಯಲ್ಲಿ, ಆ.ಸ.ನೌ ರವರು ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## ವಿಚಾರಣಾ ವರದಿ

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಬಿ.ಎಸ್. ಶ್ರೀರಾಮ್, ಕಂದಾಯ ನಿರೀಕ್ಷಕರು, ವಾರ್ಡ್ ನಂ.38, ಆರ್.ಆರ್. ನಗರ, ಬಿ.ಬಿ.ಎಂ.ಪಿ, ಬೆಂಗಳೂರು ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

19/8/14

(ಜಗದೀಶ್ವರ ಎಂ)
(ಪ್ರಭಾರ) ಅಪರ ನಿಬಂಧಕರು ವಿಚಾರಣೆಗಳು-13,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| |
|---|
| **Witness examined on behalf of the Disciplinary Authority** |
| **PW-1:** Sri.Lakshminarayana (Original) |
| **PW-2**: Sri. D. Venkatesh(Original) |
| **PW-3:** Sri. Krishna M.V (Original) |
| **PW-4**: Sri. S.T. Yogesh (Original) |
| **Witness examined on behalf of the Defence** |
| **NIL** |
| **Documents marked on behalf of the Disciplinary Authority** |
| **Ex. P-1**: Complaint, page No.70 Certified Copy, page No.71 xerox copy.<br>**Ex. P-1(a):** Signature of the complainant.<br>**Ex. P-1(b):** Signature of the I.O. |
| **Ex.P-2:** Coversation between Complainant and DGO (Certified Copy)<br>**Ex.P-2(a):** Signature of the complainant.<br>**Ex.P-2(a):** Signature of the I.O. |
| **Ex.P-3:** Certified copy of details of serial numbers of the notes.<br>**Ex.P-3(a):** Signature of the complainant.<br>**Ex.P-3(a):** Signature of the I.O. |
| **Ex. P-4:** Entrustment Mahazar (Certified copies)<br>**Ex. P-4(a):** Signature of the complainant.<br>**Ex.P-4(b):** Signature of the PW-2<br>**Ex.P-4(c):** Signature of the PW-3<br>**Ex.P-2(d):** Signature of the PW-4 |
| **Ex. P-5**: Explanation of DGO (Certified copy)<br>**Ex.P-5(a):** Signature of the complainant.<br>Ex.P-5(b) : Signature of the I.O |
| **Ex. P-6**: Trap Panchanama (Certified copies)<br>**Ex.P-6(a):** Signature of the complainant.<br>**Ex.P-6(b):** Signature of the PW-2<br>**Ex.P-6(c):** Signature of the PW-3. |

| | |
|---|---|
| **Ex.P-6(d):** | Signature of the PW-4. |
| **Ex. P-7:** | Identification of Voice of Revenue Inspector Sriram by Basavalingaiah (Certified copies) |
| **Ex.P-6(a):** | Signature of the complainant. |
| **Ex.P-6(b):** | Signature of the I.O. |

**Dated this the 19th day of August 2021**

19/8/21

**(Jagadeeshwara M)**
(I/c) Additional Registrar Enquiries-13
Karnataka Lokayukta
Bangalore.

**GOVERNMENT OF KARNATAKA**

**KARNATAKA LOKAYUKTA**

No. UPLOK-1/DE/372/2015/ARE-13

Multi Storied Building,
Dr. B.R. Ambedkar Veedhi,
Bengaluru-560 001
Date: **27/08/2021**

## RECOMMENDATION

Sub:- Departmental inquiry against;
Sri B.S. Sreeram, Revenue Inspector, Ward No.38, Rajarajeshwarinagar, Bruhat Bengaluru Mahanagara Palike, Bengaluru – Reg.

Ref:- 1) Govt. Order No.ನಅಇ 310 ಎಂಎನ್‌ವೈ 2015, Bengaluru dated 29/6/2015.

2) Nomination order No.UPLOK-1/DE/372/2015, Bengaluru dated 6/7/2015 of Upalokayukta-1, State of Karnataka, Bengaluru

3) Inquiry Report dated 10/8/2021of Additional Registrar of Enquiries-13, Karnataka Lokayukta, Bengaluru

----

The Government by its order dated 29/6/2015 initiated the disciplinary proceedings against Sri B.S. Sreeram, Revenue Inspector, Ward No.38, Rajarajeshwarinagar, Bruhat Bengaluru Mahanagara Palike, Bengaluru (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/372/ 2015 Bengaluru dated 6/7/2015 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1&2/ DE/Transfers/2018 dated 6/8/2018, the Additional Registrar of

Enquiries-13, Karnataka Lokayukta, Bengaluru was re-nominated as inquiry officer to conduct departmental inquiry against DGO.

3. The DGO Sri B.S. Sreeram, Revenue Inspector, Ward No.38, Rajarajeshwarinagar, Bruhat Bengaluru Mahanagara Palike, Bengaluru was tried for the following charge:-

> "That, you-DGO/Sri. B.S. Sriram, while working as Revenue Inspector in BBMP, Ward No.38, R.R. Nagar Division during the year 2013, when complainant/Sri. K.R. Lakshminarayana, approached you on 05/09/2013 for change of khatha of property No.C-276 an industrial shed situated in 1st phase of Peenya Industrial Estate, Bangalore into the name of himself and his friend Sri. Dalphi D. Kunha which was purchased by them under registered sale deed dated:17/09/2012, you, demanded and accepted a bribe of Rs.20,000/- as token advance out of demanded bribe of Rs. 2,00,000/- at about 6.45 p.m. on 07/10/2013 in your office. Thereby you-DGO being a Government Servant failed to maintain absolute integrity and devotion to the duty, the act which is unbecoming of a Government Servant and thereby committed misconduct as enumerated U/R 3(1)(i) to (iii) of Karnataka Civil Service (Conduct) Rules 1966."

4. The Inquiry Officer (Additional Registrar of Enquiries-13) on proper appreciation of oral and documentary evidence has held that the Disciplinary Authority has proved the above charge against DGO Sri B.S. Sreeram, Revenue Inspector, Ward No.38, Rajarajeshwarinagar, Bruhat Bengaluru Mahanagara Palike, Bengaluru.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he is due to retire from service on 31/5/2034.

7. Having regard to the nature of charge (demand and acceptance of bribe) proved against DGO Sri B.S. Sreeram, Revenue Inspector, Ward No.38, Rajarajeshwarinagar, Bruhat Bengaluru Mahanagara Palike, Bengaluru, it is hereby recommended to the Government for imposing penalty of Compulsory retirement from service on DGO Sri B.S.Sreeram.

8. Action taken in the matter shall be intimated to this Authority.

Connected records are enclosed herewith.

27/8

**(JUSTICE B.S.PATIL)**
Upalokayukta,
State of Karnataka,
Bengaluru